### ಅಧ್ಯಾಯ 14

# ಅಬ್ರಹಾಮನು ಯುದ್ಧದಲ್ಲಿ ಭಾಗಿಯಾಗಿದ್ದು ಮತ್ತು ಇಬ್ಬರು ಅರಸರನ್ನು ಭೇಟಿಯಾದದ್ದು

ಯೋರ್ದನ್ ಕಣಿವೆಯನ್ನು ಆರಿಸಿಕೊಂಡು ಸೊದೋಮಿನ ಕಡೆಗೆ ತನ್ನ ಗುಡಾರವನ್ನು ಹಾಕಿಕೊಂಡಿದ್ದು ಹಲವಾರು ವಿಧಗಳಲ್ಲಿ ದುರಂತಕರವಾಗಿತ್ತು. ಅದು ಆತನ ಕುಟುಂಬವನ್ನು ಅತ್ಯಂಥ ದುಷ್ಟ ವಾತಾವರಣಕ್ಕೊಳಗಾಗುವಂತೆ ಮಾಡಿತ್ತು, ಅದು ಅವರನ್ನು ನೈತಿಕವಾಗಿ ಅಪಾಯಕ್ಕೆ ಸಿಲುಕಿಸಿತ್ತು (ನೋಡಿರಿ 19:1-8). ಅದು ಏಕ ಸತ್ಯ ದೇವರಲ್ಲಿನ ನಂಬಿಕೆಯನ್ನು ಸವೆಯುವಂತೆ ಮಾಡುವದಕ್ಕೆ ಕಾರಣವಾಗಿತ್ತು, ಆತನೇ ಜನರನ್ನು ಅವರ ದುಷ್ಟತನಕ್ಕೆ ಹೊಣೆಗಾರರನ್ನಾಗಿ ಮಾಡುವವನು ಮತ್ತು ಅಂಥ ಕೆಟ್ಟ ಕೃತ್ಯಗಳಿಗಾಗಿ ಪಶ್ಚಾತ್ತಾಪ ಪಡದವರಿಗೆ ನ್ಯಾಯತೀರಿಸುವವನು ಆಗಿರುತ್ತಾನೆ (ನೋಡಿರಿ 19:12-22). ಅಲ್ಲದೆ ಇದು ಅವರ ಜೀವಿತಗಳನ್ನು ಗಂಭೀರವಾಗಿ ಪರಿಣಾಮಕ್ಕೊಳಪಡಿಸಿತ್ತು ಯಾಕೆಂದರೆ ಸೊದೋಮಿನಲ್ಲಿ ವಾಸಿಸುತ್ತಿರುವವರಾಗಿ, ಅವರು ಮೂಡಣ ದಿಕ್ಕಿನಿಂದ ಬಂದ ನಾಲ್ವರು ಅರಸರ ದಾಳಿಯಲ್ಲಿ ಸಿಲುಕಿಕೊಂಡಿದ್ದರು. ಈ ಅರಸರು ಮೃತ ಸಮುದ್ರದ ಪ್ರಾಂತ್ಯದಲ್ಲಿರುವ ಐದು ಮಂದಿ ರಾಜರು ತಮ್ಮ ಅಧಿಪತಿಗಳು ಕೇಳಿದ ಕಪ್ಪಗಳನ್ನು ಕೊಡುವದಕ್ಕೆ ನಿರಾಕರಿಸಿದ ಕಾರಣಕ್ಕಾಗಿ ಅವರನ್ನು ದಂಡಿಸುವದಕ್ಕೋಸ್ಕರ ಬಂದಿದ್ದರು. ಕಾನಾನಿನ ಆಗ್ನೇಯ ಗಡಿಯಲ್ಲಿದ್ದ ಐದು ಮಂದಿ ಅರಸರು ಪಟ್ಟಣ-ರಾಜ್ಯ ಮತ್ತು ಅವರ ಸಮೀಪದಲ್ಲಿರುವ ದೇಶಗಳನ್ನು ಆಳುವ ಸಣ್ಣಪುಟ್ಟ ಅರಸರಾಗಿದ್ದರೆ, ಮೂಡಣದಿಂದ ಬಂದ ನಾಲ್ವರು ಅರಸರು ಶಕ್ತಿಶಾಲಿಯಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಅವರು ಅವರಿಗಿಂತ ಬೃಹತ್ ಸೀಮೆಗಳನ್ನು ಆಳುತ್ತಿದ್ದರು, ಅವುಗಳಲ್ಲಿ ಹಲವಾರು ಪಟ್ಟಣಗಳು ಸೇರಿದ್ದು ಅವುಗಳು ರಾಜ್ಯಗಳೊಳಗೆ ಸೇರ್ಪಡೆಗೊಂಡಿದ್ದವು ಮತ್ತು ಸ್ವಲ್ಪ ಪ್ರಮಾಣದ ಸ್ವಾತಂತ್ರ್ಯಕ್ಕೋಸ್ಕರ ಕಪ್ಪವನ್ನು ಕೊಡುವಂತೆ ಒತ್ತಾಯಿಸಲ್ಪಡುವ ಪಟ್ಟಣಗಳು ಸಹ ಅದರೊಳಗೆ ಸೇರಿದ್ದವು.

## ಅರಸುಗಳ ಯುದ್ಧ (14:1-12)

**1ಆ ದಿವಸಗಳಲ್ಲಿ ಶಿನಾರಿನ ಅರಸನಾದ ಅಮ್ರಾಫೆಲನು, ಎಲ್ಲಸಾರಿನ ಅರಸನಾದ
ಅರಿಯೋಕನು. ಏಲಾಮಿನ ಅರಸನಾದ ಕೆದೊರ್ಲಗೋಮರನು, ಗೋಯಿಮದ ಅರಸನಾದ
ತಿದ್ಗಾಲನು ಈ ನಾಲ್ವರು 2,3ಈಗ ಲವಣಸಮುದ್ರವಾಗಿರುವ ಸಿದ್ದೀಮ್ ತಗ್ಗಿನೊಳಗೆ ಕೂಡಿದ್ದ**

**ಸೊದೋಮಿನ ಅರಸನಾದ ಬೆರಗನು, ಗೊಮೋರದ ಅರಸನಾದ ಬಿರ್ಶಗನು, ಅದ್ಮಾಹದ
ಅರಸನಾದ ಶಿನಾಬನು, ಚೆಬೋಯೀಮಿನ ಅರಸನಾದ ಶೆಮೇಬರನು, ಬೇಲಗಿನ ಅಂದರೆ
ಚೋಗರದ ಅರಸನು ಇವರೊಡನೆ ಯುದ್ಧಮಾಡಿದರು. 4ಬೆರಗ ಮೊದಲಾದ ಇವರು ಹನ್ನೆರಡು
ವರುಷ ಕೆದೊರ್ಲಗೋಮರನಿಗೆ ಅಧೀನರಾಗಿದ್ದು ಹದಿಮೂರನೆಯ ವರುಷದಲ್ಲಿ ತಿರುಗಿಬಿದ್ದರು.
5ಹದಿನಾಲ್ಕನೆಯ ವರುಷದಲ್ಲಿ ಕೆದೊರ್ಲಗೋಮರನೂ ಅವನಿಗೆ ಸೇರಿದ್ದ ರಾಜರೂ ಬಂದು
ಅಷ್ಟರೋತ್ ಕರ್ನಯಿಮಿನಲ್ಲಿ ರೆಫಾಯರನ್ನೂ ಹಾಮಿನಲ್ಲಿ ಜೂಜ್ಯರನ್ನೂ
ಶಾವೆಕಿರ್ಯಾತಯಿಮಿನಲ್ಲಿ ಏಮಿಯರನ್ನೂ ಸೋಲಿಸಿದರು. 6ಇದಲ್ಲದೆ ಸೇಯೀರೆಂಬ ಬೆಟ್ಟದ
ಸೀಮೆಯಲ್ಲಿ ವಾಸವಾಗಿದ್ದ ಹೋರಿಯರನ್ನು ಅಲ್ಲೇ ಸೋಲಿಸಿ ಮರಳುಕಾಡಿನ ಹತ್ತಿರವಿರುವ
ಏಲ್ಪಾರಾನಿನವರೆಗೂ ಹಿಂದಟ್ಟಿದರು. 7ಆಮೇಲೆ ಅವರು ಹಿಂದಿರುಗಿಕೊಂಡು ಕಾದೇಶ್ ಎನ್ನುವ
ಎನ್ಮಿಷ್ಪಾಟಿಗೆ ಬಂದು ಅಮಾಲೇಕ್ಯರ ಸಮಸ್ತದೇಶವನ್ನೂ ಹಚಚೋನ್‌ತಾಮರಿನಲ್ಲಿ
ವಾಸವಾಗಿದ್ದ ಅಮೋರಿಯರನ್ನೂ ಜಯಿಸಿದರು. 8ಆಗ ಸೊದೋಮ್, ಗೊಮೋರ, ಅದ್ಮಾಹ,
ಚೆಬೋಯೀಮ್, ಚೋಗರೆಂಬ ಬೇಲಗ್ ಈ ಪಟ್ಟಣಗಳ ರಾಜರು ಹೊರಟು ಅವರಿಗೆದುರಾಗಿ,
9ಅಂದರೆ ಏಲಾಮಿನ ಅರಸನಾದ ಕೆದೊರ್ಲಗೋಮರ್, ಗೋಯಿಮದ ಅರಸನಾದ ತಿದ್ಗಾಲ,
ಶಿನಾರಿನ ಅರಸನಾದ ಅಮ್ರಾಫೆಲ, ಎಲ್ಲಸಾರಿನ ಅರಸನಾದ ಅರಿಯೋಕ ಇವರಿಗೆ
ವಿರೋಧವಾಗಿ ಸಿದ್ದೀಮೆಂಬ ತಗ್ಗುಮೈದಾನದಲ್ಲಿ ತಮ್ಮ ದಂಡನ್ನು ನಿಲ್ಲಿಸಿದರು. ಹೀಗೆ ನಾಲ್ಕು
ಮಂದಿ ರಾಜರು ಐದು ಮಂದಿ ರಾಜರನ್ನು ಎದುರಿಸಿದರು. 10ಆದರೆ ಸಿದ್ದೀಮ್ ತಗ್ಗಿನಲ್ಲಿ ಕಲ್ಲರಗಿನ
ಕೆಸರುಕುಣಿಗಳು ತುಂಬಾ ಇದ್ದವು. ಸೊದೋಮ್ ಗೊಮೋರಗಳ ರಾಜರ ಕಡೆಯವರು
ಓಡಿಹೋಗುವಾಗ ಆ ಕುಣಿಗಳಲ್ಲಿ ಬಿದ್ದು ಸತ್ತರು; ಉಳಿದವರು ಬೆಟ್ಟಗಳಿಗೆ ಓಡಿಹೋದರು.
11ಗೆದ್ದವರು ಸೊದೋಮ್ ಗೊಮೋರ ಪಟ್ಟಣಗಳನ್ನು ಸೂರೆಮಾಡಿ ಅವುಗಳಲ್ಲಿದ್ದ ಎಲ್ಲಾ
ಆಸ್ತಿಯನ್ನೂ ದವಸವನ್ನೂ ತೆಗೆದುಕೊಂಡು ಹೋದರು. 12ಸೊದೋಮಿನಲ್ಲಿ ವಾಸವಾಗಿದ್ದ
ಅಬ್ರಾಮನ ತಮ್ಮನ ಮಗನಾದ ಲೋಟನನ್ನೂ ಅವನ ಆಸ್ತಿ ಸಹಿತ ಹಿಡಿದುಕೊಂಡು ಹೋದರು.**

ಪೂರ್ವದ ಕಡೆಯಿಂದ ಬಂದ ನಾಲ್ವರು ಅರಸರು ಪಶ್ಚಿಮದ ಮೇಲೆ ಆಕ್ರಮಣ ಮಾಡಿದ್ದರ ಕುರಿತಾದ ಕಥನವನ್ನು, ಕೆಲವರು ಯಾವದೇ ಐತಿಹಾಸಿಕ ಹಿನ್ನಲೆಯಿಲ್ಲದಂಥ ಕಲ್ಪನಾ ಕಥೆ ಎಂಬುದಾಗಿ ಕಾಣುತ್ತಾರೆ. ಹೇಗೂ ಇದೊಂದು ವಾಸ್ತವಿಕವಾದ ಐತಿಹಾಸಿಕ ಕಥನ ಎಂಬುದಾಗಿ ನಂಬುವದಕ್ಕೆ ಉತ್ತಮ ಕಾರಣಗಳು ಇರುತ್ತವೆ. ಉದಾಹರಣೆಗೆ, ಲೇಖಕನು ಒಂದು ಪ್ರಾಚೀನ ಮೂಲದಲ್ಲಿರುವಂತೆಯೇ ಹೇಳುತ್ತಿರುವನೋ ಎಂಬ ರೀತಿಯಲ್ಲಿ ಕಥೆಯ ನಿರೂಪಣೆಯನ್ನು ಮಾಡಿರುತ್ತಾನೆ. ಆತನು ಬರೆಯುವ ವೇಳೆ ಬಳಕೆಯಲ್ಲಿಯೇ ಇರದಂತಹ ಅತಿ ಪ್ರಾಚೀನ ಹೆಸರುಗಳನ್ನು ಪ್ರಸ್ತಾಪಿಸುತ್ತಾನೆ ಮತ್ತು ತನ್ನ ಅನಂತರದ ವಾಚಕರಿಗೆ ಅರ್ಥವಾಗಬೇಕೆಂಬುದಕ್ಕಾಗಿ ವಿವರಣಾತ್ಮಕ ಹೆಸರುಗಳನ್ನು ಅಥವಾ ಹೇಳಿಕೆಗಳನ್ನು ಸೇರ್ಪಡೆಗೊಳಿಸುತ್ತಾನೆ (ನೋಡಿರಿ 14:2, 3, 7, 8, 17).

**ವಚನ 1.** 14ನೇ ಅಧ್ಯಾಯದ ವಿಷಯದಲ್ಲಿ ಸಂದೇಹವಾದಿಗಳಿಗೆ ಇರುವ ಸಮಸ್ಯೆಗಳೊಳಗೆ ಒಂದು ಎಂದರೆ, ಪಶ್ಚಿಮದ ಐವರು ಅರಸರ ವಿರುದ್ಧವಾದ ಮೈತ್ರಿಯೊಳಗೆ ಪಾಲ್ಗೊಂಡಿದ್ದ ಪೂರ್ವದ ನಾಲ್ವರು ಅರಸರು ಯಾರು ಎಂಬುದನ್ನು ಸಂಪೂರ್ಣವಾಗಿ ಬಾಹ್ಯ ಮೂಲಗಳಿಂದ ಗುರುತಿಸುವದಕ್ಕೆ ಅಶಕ್ತರಾಗಿರುವದೇ ಆಗಿದೆ. **ಏಲಾಮಿನ ಅರಸನಾದ ಕೆದೊರ್ಲಗೋಮರನು** ಮೂಡಣ ರಾಜರ ಮೈತ್ರಿಯ ನಾಯಕನಾಗಿದ್ದನು, ಈತನಿಗೆ ಪಶ್ಚಿಮದ ಅರಸರು "ಹನ್ನೆರಡು ವರುಷ" ಕಾಲ ಸೇವೆ ಮಾಡಿದ್ದರು (14:4). ಕೆದೊರ್ಲಗೋಮರನು ನೋಹನ ಮಗನಾದ ಶೇಮನ ವಂಶದವನಾಗಿದ್ದನು, ಆತನ ಮೊದಲ ಮಗನ ಹೆಸರು

“ಏಲಾಮ” ಎಂದಾಗಿತ್ತು (10:22). ಏಲಾಮ್ಯರು ಪ್ರಾಚೀನ ಪರ್ಸಿಯದಲ್ಲಿ (ಆಧುನಿಕ ಇರಾನಿನ ನೈಋತ್ಯ ಪ್ರಾಂತ್ಯದಲ್ಲಿ) ಜೀವಿಸುತ್ತಿದ್ದರು, ಸುಸವು ಅವರ ರಾಜಧಾನಿಯಾಗಿತ್ತು.

ಕೆದೋರ್ಲಗೋಮರನು ಮಿತ್ರ ಪಡೆಗಳು ಯಾರೆಂದರೆ (1) **ಶಿನಾರಿನ** (ಶಿನಾರ ಬಾಬಿಲೋನಿಗಿದ್ದ ಹಳೆಯ ಹೆಸರಾಗಿರುತ್ತದೆ) **ಅರಸನಾದ ಅಮ್ರಾಫೆಲನು**, (2) **ಎಲ್ಲಸಾರಿನ ಅರಸನಾದ ಅರಿಯೋಕನು**, ಮತ್ತು (3) **ಗೋಯಿಮದ ಅರಸನಾದ ತಿದ್ಗಾಲನು**. ಇವರಲ್ಲಿ ಯಾವ ಅರಸನು ಸಹ ಪ್ರಾಚೀನ ಮಧ್ಯಪ್ರಾಚ್ಯದಲ್ಲಿನ ಅರಸರೊಂದಿಗೆ ಸಕಾರಾತ್ಮಕವಾಗಿ ಗುರುತಿಸಲ್ಪಟ್ಟಿರುವದಿಲ್ಲ, ಮತ್ತು ಸ್ಥಳದ ಹೆಸರುಗಳಾದ “ಎಲ್ಲಾಸಾರ”[1] ಮತ್ತು “ಗೋಯಿಮ” (“ಜನಾಂಗಗಳು” ಅಥವಾ “ದೇಶಗಳು” ಎಂದರ್ಥವಿರುವ) ಎಂಬವುಗಳು ವಾಕ್ಯದ ಹೊರಗಡೆಯಲ್ಲಿ ಪರಿಚಿತವಾಗಿರುತ್ತವೆ. ಪೂರ್ವ ಭಾಗದಲ್ಲಿದ್ದ ಪ್ರಾಮುಖ್ಯವಲ್ಲದ ರಾಜ್ಯಗಳ, ವಿಶೇಷವಾಗಿ ಎರಡನೆಯ ಸಹಸ್ರಮಾನದ ಎರಡನೆಯ ಅರ್ಧಭಾಗದಲ್ಲಿದ್ದ ರಾಜ್ಯಗಳ ಕುರಿತಾಗಿ ನಮಗಿರುವ ಜ್ಞಾನವು ಅಪೂರ್ಣವಾಗಿರುತ್ತದೆ. ಆದದರಿಂದ, ಪುರಾವೆಯಿಲ್ಲದಿರುವಿಕೆಯನ್ನು ಆ ಸಣ್ಣ ರಾಜ್ಯಗಳ ದೊರೆಗಳ ಕುರಿತಾಗಿ ಐತಿಹಾಸಿಕ ಪುರಾವೆ ಇಲ್ಲದಿರುವಿಕೆ ಎಂಬುದಾಗಿ ಎಣಿಸಕೂಡದು.

ಈ ಹೆಸರುಗಳು ವಾಕ್ಯದಲ್ಲಿ ಭರವಸವನ್ನಿಡುವದಕ್ಕೆ ಇನ್ನೊಂದು ಕಾರಣವನ್ನು ಒದಗಿಸುತ್ತದೆ, ಯಾಕೆಂದರೆ ಅವುಗಳ ಸುತ್ತ ಒಂದು ಪ್ರಾಮಾಣ್ಯದ ಮುದ್ರಿಕೆ ಇರುತ್ತದೆ. ಅವುಗಳು ಅಬ್ರಹಾಮನ ಕಾಲದಲ್ಲಿ ಮೂಡಣದ ಜನರು ಬಳಸುತ್ತಿದ್ದ ಹೆಸರುಗಳ ವಿಧಗಳಿಗೆ ಸಂಬಂಧಿಸುತ್ತವೆ. "ಕೆದೋರ್ಲಗೋಮರ" ಎಂಬುದು ಏಲಾಮ್ಯರಲ್ಲಿರುವ ಒಂದು ಹೆಸರಾಗಿರುತ್ತದೆ (*ಕುಟಿರ* ಜೊತೆಗೆ ಒಬ್ಬ ದೇವತ್ವ). ಈ ಹೆಸರು “ಏಲಾಮಿನ ಅರಸನು” ಎಂಬ ಆತನು ಬಿರುದಿಗೆ ಸರಿಯಾಗಿ ಹೊಂದಿಕೆಯಾಗುತ್ತದೆ. “ಅಮ್ರಾಫೆಲ” ಒಂದು ಯೆಹೂದಿ ಹಿನ್ನಲೆಯ ಹೆಸರಂತೆ ತೋರುತ್ತದೆ, ಅದು “ಶಿನಾರಿನ ಅರಸ” (ಬಾಬಿಲೋನ) ಎಂಬುದಕ್ಕೆ ಸಮರ್ಪಕವಾಗುವುದು. “ಅರಿಯೋಕ” ಎಂಬುದು ಹುರ್ರಿಯರ ಮೂಲದ ಹೆಸರಾಗಿದ್ದು, ಪ್ರಾಚೀನ ಪಟ್ಟಣಗಳಾದ ಮಾರಿ *(ಅರ್ರಿವುಕ್/ಅರ್ರಯೂಕ್)* ಮತ್ತು ನೂಝಿ (*ಅರಿಯುಕ್ಕೆ*) ಎಂಬುಗಳೊಂದಿಗೆ ಸಮಾನಾರ್ಥವನ್ನು ಹೊಂದಿರುತ್ತದೆ. “ತಿದ್ಗಾಲ” ಎಂಬುದು ಆದಿಯ ಹಿತ್ತೀಯ (*ತುದ್ಕಾಲಿಯಾ*) ಹೆಸರಾಗಿದ್ದು ಹಲವಾರು ಈ ಹೆಸರನ್ನು ಹೊಂದಿದ್ದರು. ತದ್ಗಾಲನು “ಜನಾಂಗಗಳ ಅರಸ” ಎಂಬದು ಅಂಟೊಲಿಯದಲ್ಲಿನ ಸರ್ವೋಚ್ಛ ಮುಖ್ಯಸ್ಥರಿಗೆ ಬಳಸುತ್ತಿದ್ದ ಒಂದು ಬಿರುದಿನೊಂದಿಗೆ ಸಾಮ್ಯತೆಯನ್ನು ಹೊಂದಿದೆ.[2] 1,000 ಅಥವಾ 1,500 ವರ್ಷಗಳ ಹಿಂದೆ ಜೀವಿಸಿದ್ದ ಇಸ್ರಾಯೇಲ್ಯನೊಬ್ಬನು ಸಂಕಲ್ಪ ಮಾಡಿಕೊಂಡಿದ್ದರೂ, ಈ ವಿಧವಾದ ಪ್ರಾಮಾಣ್ಯವೆಂದು ಅನ್ನಿಸುವಂತಹ ಕಾಲ್ಪನಿಕ ವ್ಯಕ್ತಿಗಳನ್ನು ಹುಟ್ಟು ಹಾಕಿರುವದು ಅಸಂಭವನೀಯವೆಂದು ಕಾಣಿಸುತ್ತದೆ.

**ವಚನಗಳು 2, 3.** ಮೂಡಣದ ಅರಸರು ಯಾರ ವಿರುದ್ಧವಾಗಿ ಯುದ್ಧಮಾಡಿದರೋ ಅವರು ಮುಂದೆ ಪಟ್ಟಿ ಮಾಡಲ್ಪಟ್ಟಿದ್ದಾರೆ, ಕೊನೆಯವನನ್ನು ಮಾತ್ರವೇ ಹೊರಗಿಡಲಾಗಿರುತ್ತದೆ: **ಸೊದೋಮಿನ ಅರಸನಾದ ಬೆರಗನು, ಗೊಮೋರದ ಅರಸನಾದ ಬಿರ್ಶಗನು, ಅದ್ಮಾಹದ ಅರಸನಾದ ಶಿನಾಬನು, ಚೆಬೋಯೀಮಿನ ಅರಸನಾದ ಶೆಮೇಬರನು, ಬೇಲಗಿನ ಅಂದರೆ ಚೋಗರದ ಅರಸನು**. ಈ ಪಟ್ಟಿಯಲ್ಲಿ ಕಾಣದಿರುವ ಒಂದೇ ಒಂದು ಹೆಸರೆಂದರೆ ಅದು ಏಕೆ ಬೇಲಗಿನ ಅರಸನದ್ದು ಆಗಿರುತ್ತದೆಂಬುದು ಖಚಿತವಾಗಿರುವದಿಲ್ಲ. ವಾಕ್ಯದ ಪ್ರಾಮಾಣ್ಯದ ಕುರಿತ ಒಂದು ಮುಜುಗರವನ್ನುಂಟು ಮಾಡುವದರ ಬದಲಾಗಿ, ಈ ರೀತಿಯಲ್ಲಿ ಕೈ ಬಿಡಲ್ಪಟ್ಟಿರುವದು ಅರಸರ ಪಟ್ಟಿಗೆ ಇನ್ನಷ್ಟು ವಿಶ್ವಾಸರ್ಹತೆಯನ್ನು

ಒದಗಿಸುತ್ತದೆ. ಈ ಬರಹದ ಲೇಖಕನು ಕಲ್ಪನಾತ್ಮಕ ಕಥನಕ್ಕಾಗಿ ಹೆಸರುಗಳನ್ನು ಊಹಿಸಿಕೊಂಡು ಬರೆಯುತ್ತಿದ್ದದ್ದೇ ಆಗಿದ್ದಲ್ಲಿ, ಆತನು ನಿಶ್ಚಯವಾಗಿಯೂ ಈ ಸಂದರ್ಭದಲ್ಲಿ ಸಹ ಊಹಿಸಿಕೊಂಡು ಬರೆದಿರುತ್ತಿದ್ದನಷ್ಟೆ. ಅದಕ್ಕೆ ತದ್ವಿರುದ್ಧವಾಗಿ, ಇಲ್ಲಿ ಆತನು ಒಂದು ಹೆಸರನ್ನು ಸೇರಿಸುವದಕ್ಕೆ ವಿಫಲನಾಗಿರುವುದು ಆತನು ಕಥನದ ನಿಖರತೆಯನ್ನು ಗೌರವಿಸಿದನು ಮತ್ತು ಒಂದು ಹೆಸರು ಕಾಣೆಯಾಗಿದ್ದರೂ, ಆತನು ಅದನ್ನು ನಂಬಿಗಸ್ತನಾಗಿ ಸಂರಕ್ಷಿಸಿ ಬದಲಾವಣೆ ಮಾಡದೆಯೇ ಬರೆಯಲು ಬಯಸಿದ್ದನು. ಬೈಬಲಿನ ಕಥನಗಳಲ್ಲಿ ಹೆಸರುಗಳು ಮತ್ತು ಘಟನೆಗಳು ಎರಡೂ ಈ ವ್ಯಕ್ತಿಗಳು ಆಳ್ವಿಕೆ ಮಾಡುತ್ತಿದ್ದ ಪ್ರಾಂತ್ಯಗಳಿಗೆ ಸರಿ ಹೊಂದುತ್ತವೆ.

ಮೂಡಣದ ನಾಲ್ವರು ಅರಸರು ಅಂತಿಮವಾಗಿ ಐದು ಮಂದಿ ಅರಸರಿಗೆ ವಿರುದ್ಧವಾಗಿ ಪಶ್ಚಿಮಕ್ಕೆ ಬಂದರು, ಆ ಪಶ್ಚಿಮದ ಅರಸರು **ಈಗ ಲವಣಸಮುದ್ರವಾಗಿರುವ ಸಿದ್ದೀಮ್ ತಗ್ಗಿನೊಳಗೆ** ವಾಸಿಸುತ್ತಿದ್ದರು. ಪಶ್ಚಿಮದ ಐದು ಪಟ್ಟಣಗಳು (14:2) ಮತ್ತು "ಸಿದ್ದೀಮ್ ತಗ್ಗು" ಇವುಗಳನ್ನು ಖಚಿತವಾಗಿ ಯಾವವೆಂದು ಗುರುತಿಸುವದಕ್ಕೆ ಸಾಧ್ಯವಿಲ್ಲ, ಅವುಗಳು ಮೃತ (ಲವಣ) ಸಮುದ್ರದ[3] ದಕ್ಷಿಣ ಮೂಲೆಯಲ್ಲಿದ್ದವು ಎಂಬುದಾಗಿ ಸಾಮಾನ್ಯ ನಂಬಿಕೆಯಾಗಿರುತ್ತದೆ (14:8-10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

**ವಚನ 4.** ಲೇಖಕನು ಪಶ್ಚಿಮದಲ್ಲಿನ ಐದು ಮಂದಿ ಚಿಕ್ಕ ಅರಸರು **ಹನ್ನೆರಡು ವರುಷ**ಗಳ ಕಾಲ **ಕೆದೊರ್ಲಗೋಮರನಿಗೆ ಅಧೀನರಾಗಿದ್ದು** ನಂಬಿಗಸ್ತರಾಗಿ ಸೇವೆ ಸಲ್ಲಿಸಿದ್ದರು ಎಂದು ಪ್ರಸ್ತಾಪಿಸುತ್ತಾನೆ; ಆದರೆ **ಹದಿಮೂರನೆಯ ವರುಷ** ಆರಂಭವಾದ ವೇಳೆ ಅವರು **ತಿರುಗಿಬಿದ್ದರು**. ಇದರರ್ಥವು ಏನೆಂದರೆ ಅವರು ತಮ್ಮ ಅಧಿಪತಿಗಳಿಗೆ ವಾರ್ಷಿಕ ಕಪ್ಪವನ್ನು ಕಳುಹಿಸಿ ಕೊಡುವದಕ್ಕೆ ನಿರಾಕರಿಸಿದರು (ನೋಡಿರಿ 2 ಅರಸು 18:7, 13-16).

**ವಚನಗಳು 5-7. ಹದಿನಾಲ್ಕನೆಯ ವರುಷ**ವು ಬಂದಾಗ, **ಕೆದೊರ್ಲಗೋಮರ** ಮತ್ತು ಆತನ ಜೊತೆಗಿದ್ದ ರಾಜರು ಪಶ್ಚಿಮದ ಮೇಲೆ ದಾಳಿ ಮಾಡಿದರು. ಏಲಾಮಿನ ಅರಸನು ಬಂಡಾಯವೆದ್ದಿದ್ದ ತನ್ನ ಸಾಮಂತರ ಮೇಲೆ ದಾಳಿ ಮಾಡುವದಕ್ಕಾಗಿ ಏಕೆ "ಹದಿನಾಲ್ಕನೆಯ ವರುಷ" ದ ತನಕ ಕಾದುಕೊಂಡಿದ್ದನು? ಸಂಭಾವ್ಯವಾಗಿ, ತಾವು ಮಾಡಿರುವ ಕೃತ್ಯದ ಗಂಭೀರವಾದ ಪರಿಣಾಮಗಳೇನು ಎಂಬುದರ ಬಗ್ಗೆ ಯೋಚಿಸುವದಕ್ಕಾಗಿ ಪಶ್ಚಿಮದ ಅರಸರಿಗೆ ದೀರ್ಘಕಾಲಾವಕಾಶವನ್ನು ಕೊಡುವದಕ್ಕೆ ಬಯಸಿರಬೇಕು. ಹೆಚ್ಚಿನ ಸಂಭಾವ್ಯತೆಯು ಏನೆಂದರೆ, ಅಂತಹ ದೂರದ ಹಾಗೂ ದುಬಾರಿಯಾದ ಪ್ರಯಾಣವನ್ನು ಆ ಸ್ಥಳಕ್ಕೆ ಮಾಡುವಂತೆ ಮತ್ತು ಪಶ್ಚಿಮ ಪಟ್ಟಣ-ರಾಜ್ಯಗಳ ಮೇಲೆ ನಿಶ್ಚಯವಾಗಿ ಜಯವನ್ನು ಗಳಿಸುವದಕ್ಕಾಗಿ ಸಾಕಷ್ಟು ಪ್ರಮಾಣದಲ್ಲಿ ಮಿಲಿಟರಿ ಶಕ್ತಿಯನ್ನು ಕ್ರೂಡೀಕರಿಸುವಂತೆ ತನ್ನ ಜೊತೆಯ ಅರಸರಿಗೆ ಮನವರಿಕೆ ಮಾಡುವದಕ್ಕೆ ಮೈತ್ರಿಯ ನಾಯಕನಿಗೆ ಅಷ್ಟೊಂದು ಸಮಯವು ಹಿಡಿದಿರಬಹುದಾಗಿದೆ.

ಪೂರ್ವದ ಮಿತ್ರ ಪಡೆಗಳು ಮೊದಲು ಯೋರ್ದನ್ ಪೂರ್ವ ದಿಕ್ಕಿನಲ್ಲಿರುವ ಪರ್ವತಗಳ ಶ್ರೇಣಿಯಲ್ಲಿ ದಾಳಿ ಮಾಡಿ, ನಂತರ ಉತ್ತರದಿಂದ ದಕ್ಷಿಣದ ಕಡೆಗೆ "ರಾಜಮಾರ್ಗದಲ್ಲಿ" ಸಾಗಿದರು (ನೋಡಿರಿ ಅರಣ್ಯಕಾಂಡ 20:17; 21:22). ಧರ್ಮೋಪದೇಶಕಾಂಡದ ಮೊದಲ ಅಧ್ಯಾಯದ ಪ್ರಕಾರವಾಗಿ, ಇಸ್ರಾಯೇಲ್ಯರು ಯೋರ್ದನ್ ನದಿಯನ್ನು ದಾಟಿ ಯೆರಿಕೋವನ್ನು ಗೆದ್ದುಕೊಳ್ಳಲು ಪೂರ್ವದ ಕಡೆಯಿಂದ ಕಾನಾನ್ ದೇಶದ ಮೇಲೆ ದಾಳಿ ಮಾಡುವ ಮುನ್ನ ಇದೇ ಮಾರ್ಗವನ್ನು ಅನುಸರಿಸಿರಿ, ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಪ್ರಯಾಣಿಸಿದ್ದರು - ದಕ್ಷಿಣದಿಂದ ಉತ್ತರದ ಕಡೆಗೆ. 14:5-7ರಲ್ಲಿ, ಯುದ್ಧದ ಆರಂಭದಲ್ಲಿ ಮೂಡಣದ ಅರಸರು ದಾಳಿ ಮಾಡಿದ

ಸ್ಥಳಗಳ ಕುರಿತಾದ ಒಂದು ವಿವರಣಾಪಟ್ಟಿಯು ಕಾಣಿಸುತ್ತದೆ.

**ಅಷ್ಟರೋತ್ ಕರ್ನಯಿಮಿನಲ್ಲಿ ರೆಫಾಯರನ್ನು**: ಅಷ್ಟರೋತ್ (ಕರ್ನಯಿಮಿ ಹತ್ತಿರದಲ್ಲಿರುವ) ಎಂಬುದು ಬಾಷಾನಿನಲ್ಲಿರುವ ಒಂದು ಪಟ್ಟಣವಾಗಿತ್ತು, ಅದು ಗಲಿಲಾಯ ಸಮುದ್ರಕ್ಕೆ ಪೂರ್ವ ದಿಕ್ಕಿನಲ್ಲಿತ್ತು. (ಇಂದು, ಅದು ಟೆಲ್ ಅಷ್ಟರೋತ್ ಎಂದು ಪರಿಚಿತವಾಗಿದೆ, ದಕ್ಷಿಣ ಸಿರಿಯದ ಗಡಿಗಳೊಳಗಿರುವಂಥ ಒಂದು ಸ್ಥಳ.) ಅಬ್ರಹಾಮನ ಕಾಲದ ಬಳಿಕ, ರೆಫಾಯರು ಪ್ರಬಲ ಹೋರಾಟವನ್ನು ನೀಡುವಂಥ ಜನರಾದರು, ಇಸ್ರಾಯೇಲ್ಯರು ಇವರನ್ನು ಸೋಲಿಸಿದ ನಂತರವಷ್ಟೇ ಕಾನಾನ್ ದೇಶವನ್ನು ಆಕ್ರಮಿಸಿಕೊಳ್ಳಲು ಶಕ್ತರಾಗಿದ್ದರು. ಅವರಲ್ಲಿ ಅತ್ಯಂಥ ಅಧಿಕ ಸಂಖ್ಯೆಯವರು ಒಟ್ಟಾಗಿ ಬಾಷಾನಿನಲ್ಲಿ ನೆಲೆಸಿದ್ದರು. ಅವರಲ್ಲಿ ಕೆಲವರು ಅತ್ಯಂತ ಎತ್ತರವಾದ ಜನರಾಗಿದ್ದರೆಂದು ಶಾಸ್ತ್ರವು ಸೂಚಿಸುತ್ತದೆ (ಧರ್ಮೋಪದೇಶಕಾಂಡ 2:10, 11, 20, 21). ಅವರ ಕೊನೆಯ ಅರಸನು ಓಗ, ಈತನ ಮಂಚವು ಒಂಭತ್ತು ಮೊಳಗಳಷ್ಟಿತ್ತು (ಹದಿಮೂರಕ್ಕಿಂತಲೂ ಹೆಚ್ಚು ಅಡಿಗಳು) (ಧರ್ಮೋಪದೇಶಕಾಂಡ 1:4; 3:10, 11).

**ಹಾಮಿನಲ್ಲಿ ಜೂಜ್ಯರು**: ಇವರು ಬೈಬಲಿನ ವಾಕ್ಯಭಾಗದಿಂದ ಮಾತ್ರವೇ ಪರಿಚಿತರಾಗಿರುತ್ತಾರೆ. ಕೆಲವರು ಇವರನ್ನು ಧರ್ಮೋಪದೇಶಕಾಂಡ 2:20ರಲ್ಲಿರುವ ಜಂಜುಮ್ಯರೊಂದಿಗೆ ಸರಿಗಟ್ಟುತ್ತಾರೆ. ಈ ಸಂಬಂಧಕ್ಕೆ ಮೃತ ಸಮುದ್ರ ಸುರುಳಿಗಳಿಂದ ಆಧಾರವು ಸಿಕ್ಕಿರುತ್ತದೆ, ಇವುಗಳು ಅವರನ್ನು "ಅಮ್ಮೋನಿನಲ್ಲಿದ್ದ ಜುಂಜಮ್ಯರು"[4] ಎಂದು ಕರೆಯುತ್ತದೆ. ಹೇಗೂ, ಹಾಮ ಎಂಬುದು ಗಿಲ್ಯಾದಿನಲ್ಲಿದ್ದ ಒಂದು ಸ್ಥಳವಾಗಿತ್ತು, ಅದು ಬಾಷಾನ ಮತ್ತು ಮೋವಾಬಿನ ನಡುವೆ ಇತ್ತು. ಕೆಲವರು ಇದನ್ನು ಟೆಲ್ ಹಾಮಿನೊಂದಿಗೆ ಗುರುತಿಸುತ್ತಾರೆ, ಅದು ಯೋರ್ದನಿನಲ್ಲಿರುವ ಇರ್ಬಿದನಿಂದ ದಕ್ಷಿಣಕ್ಕೆ ಕೆಲವು ಮೈಲಿಗಳಷ್ಟು ದೂರದಲ್ಲಿರುವದಾಗಿದ್ದು, ಪ್ರಾಚೀನ "ರಾಜಮಾರ್ಗ" ದ ಸಮೀಪವಿರುತ್ತದೆ.

**ಶಾವೆಕಿರ್ಯಾತಯಿಮಿನಲ್ಲಿ ಏಮಿಯರು**: "ಶಾವೆ" (שָׁוֵה, *ಶಾವೆಹ)* ಎಂಬ ಹೆಸರಿನ ಅರ್ಥವು "ಬಯಲು" ಅಥವಾ "ಕಣಿವೆ" ಎಂದಾಗಿರುತ್ತದೆ. ಇಲ್ಲಿ ಉಲ್ಲೇಖವು ಉತ್ತರ ಮೋವಾಬಿನಲ್ಲಿರುವ ಒಂದು ಪಟ್ಟಣವಾದ ಕಿರ್ಯಾತಯಿಮಿನಲ್ಲಿರುವ ಒಂದು ಬಯಲು ಪ್ರದೇಶದ ಕುರಿತಾಗಿರುತ್ತದೆ (ಅರಣ್ಯಕಾಂಡ 32:37; ಯೆಹೋಶುವ 13:19; ಯೆರೆಮೀಯ 48:1, 23; ಯೆಹೆಜ್ಕೇಲ 25:9). ಕಿರ್ಯಾತಯಿಮ ನಿಖರವಾಗಿ ಎಲ್ಲಿದೆ ಎಂಬುದು ಖಚಿತವಾಗಿರುವದಿಲ್ಲ.

**ಸೇಯೀರೆಂಬ ಬೆಟ್ಟದ ಸೀಮೆಯಲ್ಲಿ ವಾಸವಾಗಿದ್ದ ಹೋರಿಯರು**: ಸೇಯೀರ ಎಂಬುದು ಮೃತ ಸಮುದ್ರ ಮತ್ತು ಅಕಬಾಹ ಕೊಲ್ಲಿಯ ನಡುವಿದ್ದ ಒಂದು ಬೆಟ್ಟಗಳ ಪ್ರದೇಶವಾಗಿತ್ತು (ಧರ್ಮೋಪದೇಶಕಾಂಡ 2:12, 22), ಎದೋಮ್ಯರು ಆ ಪ್ರದೇಶದಲ್ಲಿ ಬಂದು ಅಲ್ಲಿ ನೆಲೆಗೊಳ್ಳುವದಕ್ಕೆ ಮುನ್ನ ಹೋರಿಯರು ವಾಸಿಸುತ್ತಿದ್ದರು. ಪಶ್ಚಿಮದ ರಾಜರು "ಏಲ್ಪಾರಾನಿನವರೆಗೂ" ಗೆದ್ದುಕೊಂಡರು ಎಂದು ಶಾಸ್ತ್ರವು ಹೇಳುವಾಗ, ಅವರು ಏಲಾತಿನ ವರೆಗೂ (ಆಧುನಿಕ ಎಯಿಲತ್)[5] ಹೋದರೆಂದು ತೋರುತ್ತದೆ. ಎಜೀಯೊನ-ಗೆಬೆರ ಏಲಾತಿನ ಬಳಿಯಲ್ಲಿತ್ತು, ಮತ್ತು ಇದು ಹಳೆಯ ಒಡಂಬಡಿಕೆಯ ಅನಂತರದ ಇತಿಹಾಸದಲ್ಲಿ ಒಂದು ಪ್ರಾಮುಖ್ಯವಾದ ನಗರವಾಗಿ ಮಾರ್ಪಟ್ಟಿತ್ತು (ಅರಣ್ಯಕಾಂಡ 33:35; ಧರ್ಮೋಪದೇಶಕಾಂಡ 2:8; 1 ಅರಸು 9:26–28; 10:11–22).

ಪೂರ್ವದ ಸೈನ್ಯಗಳು ಉತ್ತರದ ಕಡೆಗೆ **ಹಿಂದಿರುಗಿಕೊಂಡು ಎನ್ಮಿಷ್ಪಾಟೆಗೆ ಬಂದರು**, ಅದು ಅನಂತರದಲ್ಲಿ **ಕಾದೇಶ್** (ಕಾದೇಶ್-ಬರ್ನೇಯ) ಎಂದು ಕರೆಯಲ್ಪಟ್ಟಿತು, ಇಸ್ರಾಯೇಲ್ಯರು ಗುಡಾರ ಹಾಕಿಕೊಂಡು ಬೀಡು ಬಿಟ್ಟಿರುವ ವೇಳೆ ಗೂಢಾಚಾರರು

ಕಾನಾನಿನೊಳಗೆ ನುಸುಳಿ ದೇಶ ಮತ್ತು ಅಲ್ಲಿನ ಜನರು ಹೇಗಿರುತ್ತಾರೆಂಬುದನ್ನು ತಿಳಿಯು ಹೋಗಿದ್ದಂಥ ನೀರು ಸಿಕ್ಕುವ ಸ್ಥಳ ಇದಾಗಿತ್ತು (ಅರಣ್ಯಕಾಂಡ 13:26; 20:22). ಇದು ವಾಗ್ದಾನ ದೇಶದ ದಕ್ಷಿಣ ಗಡಿಯನ್ನು ಪ್ರತಿನಿಧಿಸುವದಾಗಿತ್ತು. ಆ ಕ್ಷೇತ್ರದಲ್ಲಿ, ನಾಲ್ಕು ಮಂದಿ ಅರಸರು **ಅಮಾಲೇಕ್ಯರ ಸಮಸ್ತದೇಶವನ್ನೂ** ಗೆದ್ದುಕೊಂಡರು. ಅವರು ಅರೆ-ಅಲೆಮಾರಿ ಜನರಾಗಿದ್ದರು ಬೈಬಲಿನ ಹೊರಗಡೆಯಲ್ಲಿ ಅಪರಿಚಿತವಾಗಿದ್ದರು, ಆದರೆ ಇವರು ಐಗುಪ್ತದಿಂದ ಹೊರಟು ಬಂದ ಇಸ್ರಾಯೇಲ್ಯರ ಮೇಲೆ ಸೀನಾಯಿ ಅರಣ್ಯದಲ್ಲಿ ಆಕ್ರಮಣ ಮಾಡಿದ್ದರು (ವಿಮೋಚನಕಾಂಡ 17:8-16). ಇಸ್ರಾಯೇಲ್ಯರ ನಾಲ್ವತ್ತು ವರ್ಷಗಳ ಅಲೆದಾಟದ ಅಂತ್ಯದಲ್ಲಿ, ಬಿಳಾಮನ ಒಂದು ನ್ಯಾಯತೀರ್ಪಿನ ಉಕ್ತಿಯಲ್ಲಿ ಅಮಾಲೇಕ್ಯರು ಎದೋಮ್ಯರೊಂದಿಗೆ ನಿಕಟವಾಗಿ ಸಂಬಂಧಗೊಳಿಸಲ್ಪಟ್ಟಿರುತ್ತಾರೆ (ಅರಣ್ಯಕಾಂಡ 24:18-20). ಸೌಲ ಮತ್ತು ದಾವೀದ ಇಬ್ಬರೂ ಕ್ರಮೇಣವಾಗಿ ಅವರ ಮೇಲೆ ನಿರ್ಣಾಯಕವಾದ ಜಯಗಳನ್ನು ಸಾಧಿಸಿದ್ದರು (1 ಸಮುವೇಲ 15; 27; 30).

**ಹಚಚೋನ್‌ತಾಮರಿನಲ್ಲಿ ವಾಸವಾಗಿದ್ದ ಅಮೋರಿಯರು**: ಇದು 2 ಪೂರ್ವಕಾಲವೃತ್ತಾಂತ 20:2ರಲ್ಲಿ ಏಂಗೆದಿ ಎಂಬುದಾಗಿ ಗುರುತಿಸಲ್ಪಟ್ಟಿರುತ್ತದೆ. ಇದು ಮೃತ ಸಮುದ್ರ ದಡದಲ್ಲಿದ್ದಂಥ ಹೇರಳವಾದ ನೀರಾವರಿಯಿರುವ ಫಲವತ್ತಾದ ಮರಳುಗಾಡಿನ ಭೂಮಿಯಾಗಿತ್ತು, ಇಲ್ಲಿಯೇ ಅನಂತರದಲ್ಲಿ ದಾವೀದನು ಹಾಗೂ ಆತನ ಜೊತೆಯ ಸೈನಿಕರು ಸೌಲನ ಸೈನ್ಯದಿಂದ ತಪ್ಪಿಸಿಕೊಂಡು ಓಡುವ ವೇಳೆ ಆತನು ಆಶ್ರಯವನ್ನು ಪಡೆದಿದ್ದನು (1 ಸಮುವೇಲ 23:29; 24:1). ಏಂಗೆದಿಯು ಹೆಬ್ರೋನಿನ ಸಮೀಪವಿರುವ "ಮಮ್ರೆಯ ತೋಪು" ನಿಂದ ಅಷ್ಟೇನೂ ದೂರವಿರಲಿಲ್ಲ, ಅಬ್ರಹಾಮನು ಇಲ್ಲಿಯೇ ನೆಲೆಗೊಂಡಿದ್ದನು. ಆದದರಿಂದ, ಲೋಟ, ಸೊದೋಮಿನ ಜನರು, ಹಾಗೂ "ಸೊದೋಮ್ ಗೊಮೋರ ಪಟ್ಟಣಗಳ ಆಸ್ತಿ" ಇವುಗಳನ್ನು ಅಪಹರಿಸಿದ ಬಳಿಕ, ಪಶ್ಚಿಮದ ಮಿತ್ರ ಪಡೆಗಳನ್ನು ಬೆನ್ನತ್ತುವದರಲ್ಲಿ ಮೂಲಪಿತೃವಿನ ಜೊತೆಯಲ್ಲಿ ಆ ಪ್ರಾಂತ್ಯದ[6] ಪೂರ್ವದ ಸೈನ್ಯಗಳು ಇದ್ದವು ಎಂಬುದು ತಾರ್ಕಿಕವಾಗಿರುತ್ತದೆ (14:11-16).

ಪಶ್ಚಿಮದ ಅರಸರು ತಮ್ಮ ವಿರುದ್ಧ ತಿರುಗಿ ಬಿದ್ದಿದ್ದ ಐದು ಮಂದಿ ರಾಜರ ಉತ್ತರ, ಪೂರ್ವ, ದಕ್ಷಿಣ, ಮತ್ತು ಪಶ್ಚಿಮ ಪಟ್ಟಣಗಳ ಈ ಗುಂಪುಗಳ ಮೇಲೆ ಮೊದಲು ದಾಳಿ ಮಾಡಿದರು ಎಂಬುದನ್ನು ಆದಿಕಾಂಡ ಪುಸ್ತಕವು ತಿಳಿಯಪಡಿಸುವದಿಲ್ಲ. ಬಹುಶಃ, ಅವರು ಪಶ್ಚಿಮದಲ್ಲಿರುವ ಪಟ್ಟಣಗಳ ಮೇಲೆ ಮೆಸಪೊತಾಮ್ಯದ ನಿಯಂತ್ರಣದ ವಿರುದ್ಧದ ಬೃಹತ್ ದಂಗೆಯೊಂದರ ಭಾಗವಾಗಿದ್ದರು - ಅಥವಾ ಭಾಗಿಯಾಗಿದ್ದಾರೆಂಬ ಸಂಶಯವಿತ್ತು. ಮೂಲ ಬಂಡಾಯಗಾರರ ಸೀಮೆಯ ಸುತ್ತಲು ಹೋಗುವದಕ್ಕೆ ಅವರಿಗೆ ಯಾವ ಕಾರಣವಿದ್ದರೂ ಸರಿಯೇ, ಪ್ರತಿಯೊಂದು ಸ್ಥಳದಲ್ಲಿ ದಾಳಿಕೋರರು ಮಾಡಿರುವ ವಿಧ್ವಂಸದ ಕುರಿತಾಗಿ ಜನರು ಮಾತಾಡಿಕೊಳ್ಳುತ್ತಿರುವಂತೆ ಈ ನಾಲ್ವರು ಅರಸರು ಐದು ಪಟ್ಟಣಗಳೊಳಗೆ ಭಯವನ್ನು ಇನ್ನಷ್ಟು ತೀಕ್ಷ್ಣಗೊಳಿಸಿದ್ದರಲ್ಲಿ ಸಂದೇಹವೇ ಇರುವದಿಲ್ಲ.

**ವಚನಗಳು 8-10.** ಪಶ್ಚಿಮದ ನಾಲ್ವರು ಅರಸರು ದಂಗೆ ಏಳುವ ಸಂಭವವಿದ್ದ ನಾಲ್ಕು (ಅಥವಾ ವಾಸ್ತವಿಕ) ಪಟ್ಟಣಗಳ ಮೇಲೆ ದಾಳಿಯನ್ನು ಮಾಡಿದ ಬಳಿಕ, ಯುದ್ಧವನ್ನು ಬಂಡಾಯವೆದ್ದಿದ್ದ ಅವರ ಸಾಮಂತ ರಾಜರ ಕಡೆಗೆ ಸಾಗಿಸಿದರು. ಎದೆಗಾರಿಕೆ ಅಥವಾ ಸಾಹಸದಿಂದ ಒಂದು ಆಶ್ಚರ್ಯಕರವಾದ ಹೆಜ್ಜೆಯನ್ನಿಡುವವರಾಗಿ, **ಸೊದೋಮ್, ಗೊಮೋರ, ಅದ್ಮಾಹ, ಚೆಬೋಯೀಮ್, ಚೋಗರೆಂಬ ಬೇಲಗ್** ಪಟ್ಟಣಗಳ ಐದು ಮಂದಿ ರಾಜರು ಕಾರ್ಯಪ್ರವೃತ್ತರಾಗಿ ಈ ದಾಳಿಕೋರರ - **ಕೆದೊರ್ಲಗೋಮರ್**, **ತಿದ್ಗಾಲ**, **ಅಮ್ರಾಫೆಲ**, ಮತ್ತು

**ಅರಿಯೋಕ** – ವಿರುದ್ಧವಾಗಿ ಯುದ್ಧಕ್ಕೆ ಸಿದ್ಧಗೊಂಡು ಸೇನೆಗಳನ್ನು ನಡಿಸಿಕೊಂಡು ಹೊರಟರು. ಈ ಕಾರ್ಯತಂತ್ರವು ಮೂರ್ಖತನವೆಂದು ಸಾಭಿತುಗೊಂಡಿತ್ತು. **ನಾಲ್ಕು ಮಂದಿ ರಾಜರು ಐದು ಮಂದಿ ರಾಜರನ್ನು ಎದುರಿಸಿದರು**ಭ ಎಂಬುದು ಪಶ್ಚಿಮದ ರಾಜರು ಮತ್ತು ಅವರ ಸೈನ್ಯಗಳು ಕದನದಲ್ಲಿ ಜಯಗೊಳ್ಳುವರು ಎಂಬ ಅಭಿಪ್ರಾಯವನ್ನು ಮೂಡಿಸುವದಾದರೂ, ಅವರು ಪೂರ್ವದಿಂದ ಬಂದಿದ್ದ ಶಕ್ತಿಶಾಲಿ ರಾಜರಿಗೆ ಸರಿಸಾಟಿಯೇ ಆಗಿರಲಿಲ್ಲ. ಪಶ್ಚಿಮದ ಸೈನ್ಯಗಳು **ಸಿದ್ದೀಮ್ ತಗ್ಗಿನಲ್ಲಿ** ಸೋಲಿಸಲ್ಪಟ್ಟರು (ನೋಡಿರಿ 14:3).

ಒಂದು ವಿವರಣಾತ್ಮಕ ಟಿಪ್ಪಣಿಯು ಹೇಳುವದೇನೆಂದರೆ **ಸಿದ್ದೀಮ್ ತಗ್ಗಿನಲ್ಲಿ ಕಲ್ಲರಗಿನ ಕೆಸರುಕುಣಿಗಳು ತುಂಬಾ ಇದ್ದವು**. "ಕಲ್ಲರಗು" ಅಥವಾ "ಡಾಂಬರು" ಎಂಬುದು ಕಲ್ಲಿದ್ದಿಲು ಡಾಂಬರು ಎಂದು ಕರೆಯಲ್ಪಡುವ ಒಂದು ಸ್ವಾಭಾವಿಕವಾದ ಹೈಡ್ರೋಕಾರ್ಬನ್ ವಸ್ತುವಾಗಿರುತ್ತದೆ. ಇದರ ಗಣಿಗಳು ಮಧ್ಯಪ್ರಾಚ್ಯದ ವಿವಿಧ ಸ್ಥಳಗಳಲ್ಲಿ ಇರುತ್ತವೆ, ಮತ್ತು ಇದು ಕೆಲವು ಸಾರಿ ಭೂಮಿಯೊಳಗಿಂದ ಗುಳ್ಳೆಗಳಾಗಿ ಉಕ್ಕಿ ಬರುತ್ತದೆ. ಇದು ಬಾಬೆಲ್ ಗೋಪುರ ನಿರ್ಮಾಣದಲ್ಲಿ ಇಟ್ಟಿಗೆಳಿಗೆ ಗಾರೆಯಾಗಿ ಬಳಸಲ್ಪಟ್ಟಿತು (11:3). ಊರ್ ಪಟ್ಟಣದಲ್ಲಿರುವ ಬೃಹತ್ ಹಂತಗೋಪುರ ದೇವಾಲಯದ ಹೊರಗಿನ ಸಾಲುಗಳು ಸಹ ಇದೇ ವಸ್ತುವಿನಿಂದ ಜೋಡಿಸಲ್ಪಟ್ಟಿದ್ದವು, ಅಬ್ರಹಾಮನು ಈ ಊರಿನಲ್ಲಿಯೇ ಬೆಳೆದಿದ್ದನು.[7] ಯುದ್ಧವು ನಡೆದ ಸಿದ್ದೀಮ್ ತಗ್ಗು ಮೃತ ಸಮುದ್ರದ ದಕ್ಷಿಣ ಭಾಗದ ಕೊನೆಯಲ್ಲಿತ್ತೆಂದು ಇದರ ಕಾರಣದಿಂದ ಪಂಡಿತರು ನಂಬುವಂತಾಗಿರುತ್ತದೆ. ಪ್ರಥಮ ಶತಮಾನದಲ್ಲಿ, Josephusನು ಮೃತ ಸಮುದ್ರವನ್ನು "ಕಲ್ಲಿದ್ದಿಲು ಡಾಂಬರಿನ ಕೆರೆ"[8] ಎಂದು ಕರೆದನು ಯಾಕೆಂದರೆ ನೀರಿನ ಮೇಲ್ಭಾಗದಲ್ಲಿ ಡಾಂಬರಿನ ಬೃಹತ್ ಗುಡ್ಡೆಗಳು ತೇಲಾಡುವುದು ಅನೇಕ ಸಾರಿ ಕಾಣಿಸುತ್ತಿತ್ತು, ಮತ್ತು ಇದರ ವರದಿಗಳು ಆಧುನಿಕ ಕಾಲಗಳಲ್ಲಿ ಸಹ ಮುಂದುವರೆದಿರುತ್ತವೆ.[9]

ಕಥನವು **ಸೊದೋಮ್ ಗೊಮೋರಗಳ ರಾಜರ ಕಡೆಯವರು** ಭಯದಿಂದ **ಓಡಿಹೋಗುವಾಗ ಆ** ಡಾಂಬರು **ಕುಣಿಗಳಲ್ಲಿ ಬಿದ್ದರು** ಎಂದು ಹೇಳುವ ಮೂಲಕ ಮುಂದುವರೆಯುತ್ತದೆ. 14:17ರಲ್ಲಿ ಸೊದೋಮಿನ ರಾಜನು ಪುನಃ ಪ್ರಸ್ತಾಪಿಸಲ್ಪಟ್ಟಿರುತ್ತಾನೆ ಎಂಬ ವಾಸ್ತವಾಂಶವನ್ನು ಹೊರತು ಪಡಿಸಿ, ಅವರು ಅಲ್ಲಿ ಮರಣಿಸಿದರು ಎಂಬುದು ಒಂದು ಸ್ವಾಭಾವಿಕ ಊಹೆಯಾಗಿರುತ್ತದೆ. ಇದು ಯಾವದೇ ಗೊಂದಲವನ್ನುಂಟು ಮಾಡತಕ್ಕದ್ದಲ್ಲ, ಯಾಕೆಂದರೆ נָפַל (*ನಾಪಾಲ್*, "ಬಿದ್ದರು") ಎಂಬ ಇಬ್ರಿಯ ಕ್ರಿಯಾಪದವು ಒಬ್ಬ ವ್ಯಕ್ತಿಯು ಸ್ವತಃ ತನ್ನನ್ನು ಬಗ್ಗಿಸಿಕೊಳ್ಳುವುದು ಎಂಬ ವಿಚಾರವನ್ನು ಸಹ ತಿಳಿಸುತ್ತದೆ. ಉದಾಹರಣೆಗೆ, ರೆಬೆಕ್ಕಳು 24:64ರಲ್ಲಿ ತನ್ನ ಒಂಟೆಯಿಂದ "ಇಳಿದು" *(ನಾಪಾಲ್)* ಅಥವಾ "ಕೆಳಕ್ಕೆ ಇಳಿದಳು" (NIV). 14:10ರಲ್ಲಿ ಈ ಕ್ರಿಯಾಪದವು ಇದೇ ವಿಧದಲ್ಲಿ ಬಳಸಲ್ಪಟ್ಟಿರುವದಾದರೆ, ಸೊದೋಮಿನ ರಾಜರು ಅಡಗಿಕೊಳ್ಳುವದಕ್ಕೋಸ್ಕರ ಸ್ವಯಂಪ್ರೇರಿತರಾಗಿ ಡಾಂಬರುಗಳ ಕುಣಿಗಳಲ್ಲಿ ಜಿಗಿದಿರಬಹುದು, ಆ ಸಂದರ್ಭದಲ್ಲಿ ಮರಣದಿಂದ ತಪ್ಪಿಸಿಕೊಂಡಿರಬಲ್ಲರು (ನೋಡಿರಿ ಯೆಹೋಶುವ 10:16). ಅದಕ್ಕೆ ತದ್ವಿರುದ್ಧವಾಗಿ, ಕ್ರಿಯಾಪದದ ಸಾಮಾನ್ಯವಾದ ಅರ್ಥವನ್ನು ಬಳಸುವದಾದರೆ ಮತ್ತು ಡಾಂಬರು ಕುಣಿಗಳಲ್ಲಿ ಅರಸರು ಬಿದ್ದ ಸತ್ತಿರುವದಾದರೆ, ಅವರ ಪ್ರಜೆಗಳು ಶೀಘ್ರದಲ್ಲಿಯೇ ಹೊಸ ಅರಸರನ್ನು ನೇಮಕ ಮಾಡಿಕೊಂಡರು ಎಂದರ್ಥವಾಗುವುದು. ಅಂತೂ, ಅಬ್ರಹಾಮನು ಸೊದೋಮಿನವರನ್ನು ಬಿಡಿಸಿಕೊಂಡು ಬಂದ ಬಳಿಕ ಸೊದೋಮಿನ ಅರಸನೊಬ್ಬನು ಅಬ್ರಹಾಮನ ಸಂಗಡ ಮಾತಾಡಿದನಷ್ಟೆ (14:17). ಏನೇ ಸಂಭವಿಸಿದ್ದರೂ ಸರಿಯೇ, ಐದು ಮಂದಿ ಅರಸರ ಸೋಲು ಸಂಪೂರ್ಣ ಪರಾಜಯವೇ ಆಗಿತ್ತು. ಯುದ್ಧದಲ್ಲಿ **ಉಳಿದವರು ಬೆಟ್ಟಗಳಿಗೆ ಓಡಿಹೋದರು**.

**ವಚನಗಳು 11, 12.** ಜಯವನ್ನು ಗಳಿಸಿದ್ದರ ನಿಮಿತ್ತ, ನಾಲ್ಕು ಮಂದಿ ಅರಸರು ಯುದ್ಧದಿಂದ ದೊರೆತ ಸಂಪತ್ತುಗಳನ್ನು ಕೊಳ್ಳೆ ಹೊಡೆಯಲು ತೊಡಗಿದರು, ಅದರಲ್ಲಿ **ಸೊದೋಮ್ ಗೊಮೋರ ಪಟ್ಟಣಗಳ ಎಲ್ಲಾ ಆಸ್ತಿ** ಮತ್ತು **ದವಸ** ಇವುಗಳು, ಮಾತ್ರವಲ್ಲದೆ ಅವುಗಳಲ್ಲಿನ ಜನರು ಸಹ ಸೇರಿದ್ದರು. ಅದರ ಜೊತೆಗೆ, **ಅಬ್ರಾಮನ ತಮ್ಮನ ಮಗನಾದ ಲೋಟ**, ಮತ್ತು ಆತನ ಕುಟುಂಬದವರೆಲ್ಲರನ್ನು ಮತ್ತು **ಆಸ್ತಿ** ಸಹಿತ ಹಿಡಿದುಕೊಂಡು ಹೋದರು. ಇದು ಲೋಟನ ಕುರಿತಾದ ಹೊಸ ಮಾಹಿತಿಯಾಗಿರುತ್ತದೆ. ಆತನು "ಗುಡಾರ ಹಾಕಿಸಿ ವಸತಿ ಮಾಡುತ್ತಾ ಸೊದೋಮಿಗೆ ಬಂದನು" ಎಂದು ಹೇಳಲ್ಪಟ್ಟಿತ್ತು (13:12), ಕೊನೆಯ ಸಾರಿಗೆ ಆತನ ಬಗ್ಗೆ ಪ್ರಸ್ತಾಪಿಸಲ್ಪಟ್ಟಿದ್ದು ಇದೇ ಆಗಿರುತ್ತದೆ. ಈಗ ಆತನು ಪಟ್ಟಣದಲ್ಲಿ ವಾಸಿಸುತ್ತಿದ್ದನುಲ ಮತ್ತು ಈ ಯುದ್ಧಕ್ಕೂ ಆತನಿಗೂ ಸಂಬಂಧವೇ ಇರಲಿಲ್ಲ, ಆತನು ಮತ್ತು ಆತನ ಪರಿವಾರವು ಪೂರ್ವದ ಅರಸರ ವಿರುದ್ಧ ಮೂರ್ಖತನದಿಂದ ತಿರುಗಿ ಬಿದ್ದಿದ್ದ ಸೊದೋಮಿನ ಪ್ರಜೆಗಳ ಗತಿಯಲ್ಲಿ ಪಾಲುಗಾರರಾಗಿದ್ದರು.

## ಅಬ್ರಹಾಮನು ಲೋಟನನ್ನು ಹಾಗೂ ಇತರ ಸೆರೆಯಾಳುಗಳನ್ನು ಕಾಪಾಡಿದ್ದು (14:13-16)

**13ತಪ್ಪಿಸಿಕೊಂಡವನೊಬ್ಬನು ಇಬ್ರಿಯನಾದ ಅಬ್ರಾಮನ ಬಳಿಗೆ ಬಂದು ಇದನ್ನು ತಿಳಿಸಿದನು. ಅಬ್ರಾಮನು ಅಮೋರಿಯನಾದ ಮಮ್ರೆಯನ ತೋಪಿನ ಬಳಿಯಲ್ಲಿ ವಾಸವಾಗಿದ್ದನು. ಮಮ್ರೆಯನು ಎಷ್ಕೋಲ ಆನೇರರಿಗೆ ಸಹೋದರನು; ಇವರಿಬ್ಬರಿಗೂ ಅಬ್ರಾಮನಿಗೂ ಒಡಂಬಡಿಕೆಯಿತ್ತು. 14ಅಬ್ರಾಮನು ತನ್ನ ತಮ್ಮನ ಮಗನು ಸೆರೆಗೆ ಸಿಕ್ಕಿದ್ದನ್ನು ಕೇಳಿ ತನ್ನ ಮನೆಯಲ್ಲೇ ಹುಟ್ಟಿ ಬೆಳೆದ ಶಿಕ್ಷಿತರಾದ ಮುನ್ನೂರ ಹದಿನೆಂಟು ಮಂದಿ ಆಳುಗಳನ್ನು ಯುದ್ಧಕ್ಕೆ ಸಿದ್ಧಮಾಡಿಕೊಂಡು ಹೊರಟು ಆ ರಾಜರನ್ನು ದಾನೂರಿನವರೆಗೆ ಹಿಂದಟ್ಟಿದನು. 15ಆಗ ಅವನು ರಾತ್ರಿ ವೇಳೆಯಲ್ಲಿ ತನ್ನ ದಂಡನ್ನು ಎರಡು ಭಾಗ ಮಾಡಿ ತನ್ನ ಭಟರೊಡನೆ ಅವರ ಮೇಲೆ ಬಿದ್ದು ಹೊಡೆದು ದಮಸ್ಕಪಟ್ಟಣದ ಉತ್ತರ ಕಡೆಯಲ್ಲಿರುವ ಹೋಬಾ ಊರಿನ ತನಕ ಹಿಂದಟ್ಟಿದನು. 16ರಾಜರು ಅಪಹರಿಸಿದ್ದ ಎಲ್ಲಾ ವಸ್ತುಗಳನ್ನು ಅವನು ತೆಗೆದುಕೊಂಡನು. ತನ್ನ ತಮ್ಮನ ಮಗನಾದ ಲೋಟನನ್ನೂ ಅವನ ಆಸ್ತಿಯನ್ನೂ ಬಿಡಿಸಿಕೊಂಡದ್ದಲ್ಲದೆ ಸೆರೆಯಲ್ಲಿದ್ದ ಸ್ತ್ರೀಯರನ್ನೂ ಮಿಕ್ಕಾದವರನ್ನೂ ತೆಗೆದುಕೊಂಡು ಬಂದನು.**

**ವಚನ 13.** ಮೃತ ಸಮುದ್ರದ ಉತ್ತರ, ಪೂರ್ವ, ದಕ್ಷಿಣ, ಮತ್ತು ಪಶ್ಚಿಮ ದಿಕ್ಕುಗಳಲ್ಲಿ ನಡೆಯುತ್ತಿದ್ದ ಯುದ್ಧಗಳ ಬಗ್ಗೆ ಅಬ್ರಹಾಮನಿಗೆ ನಿಶ್ಚಯವಾಗಿಯೂ ತಿಳಿದು ಬಂದಿತ್ತು; ಆದರೆ ಅಬ್ರಹಾಮನು ವಾಸಿಸುತ್ತಿದ್ದ **ಮಮ್ರೆಯನ ತೋಪಿನ ಬಳಿಯಲ್ಲಿ ತಪ್ಪಿಸಿಕೊಂಡವನೊಬ್ಬನು** ಬರುವ ತನಕವೂ ಅವನಿಗೆ ಸೊದೋಮ್ ಗೊಮೋರ ಪಟ್ಟಣಗಳ ಪ್ರಾಂತ್ಯಗಳ ಕುರಿತಾದ ಸುದ್ದಿಯು ಗೊತ್ತಿರಲಿಲ್ಲ (ನೋಡಿರಿ 13:18). ಈ ಮನುಷ್ಯನು ಲೋಟ ಮತ್ತು ಆತನ ಕುಟುಂಬಕ್ಕಾಗಿರುವ ಗತಿಯ ಬಗ್ಗೆ ತಿಳಿಸಿದನು. ಮೂಡಣದ ರಾಜರಿಂದ ಬಯಲಿನಲ್ಲಿರುವ ಪಟ್ಟಣಗಳು ಒಂದು ಭಯಂಕರವಾದ ಸೋಲನ್ನು ಅನುಭವಿಸಿರುತ್ತವೆ, ಇದರಿಂದಾಗಿ ಅವುಗಳಲ್ಲಿನ ಜನರನ್ನು - ಲೋಟನ ಸಮೇತವಾಗಿ - ಅಪಹರಿಸಿಕೊಂಡು ಹೋಗಲಾಗಿರುತ್ತದೆಂದು ಮತ್ತು ಅವರ ಸಾಮಗ್ರಿಗಳು, ಆಹಾರ ವಸ್ತುಗಳು, ಹಾಗೂ ಸ್ವತ್ತುಗಳಿಗೆ ಹಾನಿಯುಂಟಾಗಿರುತ್ತೆಂದು ವರದಿ ಮಾಡಿದನು.

ತಪ್ಪಿಸಿಕೊಂಡು ಬಂದವನು **ಇಬ್ರಿಯನಾದ ಅಬ್ರಾಮನಿಗೆ** ಅಶುಭವಾರ್ತೆಯನ್ನು

ನೀಡಿದನೆಂಬುದಾಗಿ ಕಥನವು ತಿಳಿಸುತ್ತದೆ. ಈ ಪದಗುಚ್ಛವನ್ನು ಬಳಸಿದ ಉದ್ದೇಶವು ಆತನನ್ನು **ಅಮೋರಿಯನ** ಸಹೋದರರಿಂದ ಪ್ರತ್ಯೇಕಗೊಳಿಸುವದಾಗಿತ್ತೆಂಬುದು ಸ್ಪಷ್ಟವಾಗಿರುತ್ತದೆ: "ಮಮ್ರೆ," **ಎಷ್ಕೋಲ**,[10] ಮತ್ತು **ಆನೇರ**. ಹಳೆಯ ಒಡಂಬಡಿಕೆಯಲ್ಲಿ "ಇಬ್ರಿಯ" (עִבְרִי, *ಇಬ್ರಿ*)[11] ಎಂಬ ಪದವು ಇದೇ ಮೊದಲ ಬಾರಿಗೆ ಬಳಸಲ್ಪಟ್ಟಿರುತ್ತದೆ ಮತ್ತು ಇದು ಅಬ್ರಹಾಮನನ್ನು ಸೂಚಿಸಲು ಬಳಸಲ್ಪಟ್ಟಿರುವ ಒಂದೇ ಒಂದು ಸಂದರ್ಭವಾಗಿರುತ್ತದೆ. ಈ ಪದವು ಅನಂತರದಲ್ಲಿ ಯೋಸೇಫನ ಕಥೆಯೊಳಗೆ (39:14; 40:15; 41:12; 43:32) ಮತ್ತು ಇಸ್ರಾಯೇಲನ ಕಥೆಯಲ್ಲಿ ಕಾಣಿಸಿಕೊಳ್ಳುತ್ತದೆ (ವಿಮೋಚನಕಾಂಡ 1:15; 2:6, 11; 1 ಸಮುವೇಲ 4:6; 13:3, 19; 14:11; 29:3; ಯೆರೆಮೀಯ 34:9; ಯೋನ 1:9). ಇದು ಯಾವಾಗಲೂ ಅಬ್ರಹಾಮನ ಸಂತತಿಯವರನ್ನು ಮಿಕ್ಕವರಿಂದ ಪ್ರತ್ಯೇಕಿಸುವದಕ್ಕಾಗಿ ಬಳಸಲ್ಪಟ್ಟಿರುತ್ತದೆ.

ಒಂದು ಸಂದರ್ಭದಲ್ಲಿ, "ಇಬ್ರಿಯ" ಮತ್ತು "ಹಬಿರು" (ಕೆಲವು ಸಾರಿ "ಹಪಿರು" ಅಥವಾ "ಅಪಿರು" ಎಂದು ಉಚ್ಚರಿಸಲ್ಪಡುತ್ತದೆ) ಪದಗಳ ನಡುವಿನ ಹೋಲಿಕೆಗಳ ಕಾರಣದಿಂದಾಗಿ, ಈ ಇಬ್ಬರು ಜನಾಂಗಗಳು ಒಬ್ಬರಿಗೊಬ್ಬರು ಸಂಬಂಧ ಹೊಂದಿಗೆ ಎಂದು ಯೋಚಿಸಲಾಗಿತ್ತು. ಪ್ರಾಚೀನ ಮಧ್ಯಪ್ರಾಚ್ಯದಲ್ಲೆಲ್ಲಾ ಸಿಕ್ಕುವ, ಕ್ರಿ.ಪೂ. ಹನ್ನೆರಡರಿಂದ ಹನ್ನೊಂದನೆಯ ಶತಮಾನಗಳಿಗೆ ಸೇರಿದ ಬರಹಗಳಲ್ಲಿ ಹಬಿರು ಜನರು ಪ್ರಸ್ತಾಪಿಸಲ್ಪಟ್ಟಿರುತ್ತಾರೆ. ಅವರು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ವಲಸೆ ಹೋಗುತ್ತಿದ್ದಂಥ ಮತ್ತು ಹೋದ ಕಡೆಗಳಲ್ಲೆಲ್ಲಾ ಹೊರಗಿನವರೆಂದು ಪರಿಗಣಿಸಲ್ಪಡುತ್ತಿದ್ದಂಥ ವಿವಿಧ ಜನಾಂಗೀಯ ಜನರಿಂದ ಕೂಡಿದ ಗುಂಪುಗಳಾಗಿದ್ದರು. ಕೆಲವು ಸಾರಿ ಅವರು ಅಪರಾಧ ಮಾಡಿ ತಪ್ಪಿಸಿಕೊಂಡು ತಿರುಗಾಡುವವರು ಆಗಿರುತ್ತಿದ್ದರು ಮತ್ತು ಲೂಟಿ ಹೊಡೆಯುವ ತಂಡಗಳಾಗಿರುತ್ತಿದ್ದರು. ಈ ಗುಂಪುಗಳ ಸದಸ್ಯರು ಪಟ್ಟಣಗಳು ಮತ್ತು ನಗರ-ರಾಜ್ಯಗಳ ಸಣ್ಣಪುಟ್ಟ ಅರಸರ ಸೈನ್ಯಗಳಲ್ಲಿ ವ್ಯಪಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರು. ಅನಂತರದಲ್ಲಿ ಕಾನಾನ್ ದೇಶದ ಮೇಲೆ ಆಕ್ರಮಣ ಮಾಡಿದ ಇಸ್ರಾಯೇಲ್ಯರು ಕಾನಾನ್ಯರಿಂದ ಹಬಿರು ಜನರೆಂಬಂತೆ ಕಾಣಲ್ಪಟ್ಟಿರುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹೇಗೂ, ಇಬ್ರಿಯರನ್ನು ಹಬಿರು ಜನರೊಂದಿಗೆ ಸಂಬಂಧಗೊಳಿಸುವುದು ಕೈ ಬಿಡಲ್ಪಟ್ಟಿರುತ್ತದೆ ಯಾಕೆಂದರೆ ಹಬಿರು ಎಂಬುದು ಇಬ್ರಿಯರು ಬಹುಸಂತಾನವುಳ್ಳವರಾಗಿ ಹೆಚ್ಚಿ ಒಂದು ಜನಾಂಗವಾಗಿ ಮಾರ್ಪಡುವದಕ್ಕೆ ನೂರಾರು ವರ್ಷಗಳ ಮುಂಚೆ ಮಧ್ಯಪ್ರಾಚ್ಯ ಬರಹಗಳಲ್ಲಿ ಕಾಣಿಸಿಕೊಂಡಿರುತ್ತದೆ. ಇಬ್ರಿಯರು ಇನ್ನೂ ಐಗುಪ್ತದಲ್ಲಿ ದಾಸತ್ವದೊಳಗೆ ಇರುವ ವೇಳೆ ಅಥವಾ ಅರಣ್ಯದಲ್ಲಿ ಅಲೆದಾಡುತ್ತಿರುವ ವೇಳೆ, ಈ ಜನರು ಕಾನಾನಿನ ಮೇಲೆ ದಾಳಿ ಇಟ್ಟಿದ್ದರು.[12]

ಸೊದೋಮ್ ಗೊಮೋರ ಪಟ್ಟಣಗಳ ಸೋಲು ಮತ್ತು ಲೋಟ ಹಾಗೂ ಆತನ ಕುಟುಂಬದವರು ಹಿಡಿದುಕೊಂಡು ಹೋಗಲ್ಪಟ್ಟ ಕುರಿತಾದ ಸುದ್ದಿಯು ಅಬ್ರಹಾಮನಿಗೆ ಒಂದು ದುರಂತಕರ ಹೊಡೆತವಾಗಿತ್ತು, ಆದರೆ ಆತನು ಈಗಾಗಲೇ ಮೂವರು ಅಮೋರಿಯ ಸಹೋದರರ - ಮಮ್ರೆ, ಎಷ್ಕೋಲ, ಮತ್ತು ಆನೇರ - ಸಂಗಡ ಒಂದು ರಕ್ಷಣಾತ್ಮಕ ಮೈತ್ರಿಯನ್ನು ಮಾಡಿಕೊಂಡಿದ್ದನು. ಈ ಮೂವರು ಅಮೋರಿಯರು ಹೋರಾಟ ನಡೆಸಬಲ್ಲ ಸೇವಕರನ್ನು ಹೊಂದಿದ್ದರು, ಅದೇ ರೀತಿಯಲ್ಲಿ ಅಬ್ರಹಾಮನ ಬಳಿಯಲ್ಲಿಯೂ ಅಂಥವರು ಇದ್ದರು, ಅದ್ದರಿಂದ ವಾಕ್ಯವು **ಇವರಿಬ್ಬರಿಗೂ ಅಬ್ರಾಮನಿಗೂ ಒಡಂಬಡಿಕೆಯಿತ್ತು** ಎಂದು ಹೇಳುತ್ತದೆ.

בַּעֲלֵי בְרִית *(ಬಾಲೇ ಬೆರಿಥ್)* ಎಂಬ ಇಬ್ರಿಯ ಪದಗುಚ್ಛವು "ಇಬ್ಬರಿಗೂ ಒಡಂಬಡಿಕೆಯಿತ್ತು" ಎಂದು ಅನುವಾದಿಸಲ್ಪಟ್ಟಿದ್ದು, ಅದರ ಅಕ್ಷರಶಃ ಅರ್ಥವು

"ಒಡಂಬಡಿಕೆಯನ್ನು ಹೊಂದಿರುವವರು"[13] ಅಥವಾ "ಒಂದು ಒಪ್ಪಂದದ ಬಂಧದಲ್ಲಿರುವವರು"[14] ಎಂದಾಗಿರುತ್ತದೆ. *ಬೆರಿಥ್* ಎಂಬ ಪದವು ನಿಯತ ಕ್ರಮವಾಗಿ ಒಂದು "ಒಡಂಬಡಿಕೆ" ಅಥವಾ ಎರಡು ಪಕ್ಷಗಳ ನಡುವಿನ ಬದ್ಧಪಡಿಸುವ ಒಪ್ಪಂದ ಎಂಬುದಕ್ಕೆ ಬಳಸುವ ಬಿರುದು ಆಗಿರುತ್ತದೆ. ದೇವರು ನೋಹನ ಸಂಗಡ ಒಡಂಬಡಿಕೆಯನ್ನು ಮಾಡಿದಾಗ ಬಳಸಿದಂಥ (6:18; 9:9-16) ಮತ್ತು ಅಬ್ರಹಾಮನ ಸಂಗಡ ಹಲವಾರು ಸಾರಿ ಬಳಸಲಿದ್ದ ಪದವು ಇದೇ ಆಗಿರುತ್ತದೆ (15:18; 17:2, 4, 7, 9, 10). ಅನಂತರದ ಶತಮಾನಗಳಲ್ಲಿ, ಮೋಶೆಯ ಧರ್ಮಶಾಸ್ತ್ರವು ಕಾನಾನಿನಲ್ಲಿರುವ ಅಮೋರಿಯರ ಸಂಗಡ ಒಡಂಬಡಿಕೆ ಮಾಡಿಕೊಳ್ಳುವದನ್ನು ನಿಷೇಧಿಸುತ್ತದೆ ಯಾಕೆಂದರೆ ಅವರು ದೇವರ ಜನರ ಹೃದಯಗಳನ್ನು ಮರುಳುಗೊಳಿಸಿ ಬೇರೆ ದೇವರುಗಳನ್ನು ಆರಾಧಿಸುವಂತೆ ಮಾಡುವರು ಎಂಬುದೆ (ಧರ್ಮೋಪದೇಶಕಾಂಡ 7:1-4). ಅಬ್ರಹಾಮನ ಪ್ರಕರಣದಲ್ಲಿ ಅದು ಒಂದು ಸಮಸ್ಯೆಯಾಗಿರಲಿಲ್ಲ ಎಂದು ತೋರುತ್ತದೆ, ಆತನು ಗೇರಾರಿನ ಅರಸನೊಂದಿಗೆ ಒಂದು ಒಡಂಬಡಿಕೆ ಮಾಡಿಕೊಂಡನು ಮತ್ತು ಅದಕ್ಕೆ ನಂಬಿಗಸ್ತನಾಗಿರುತ್ತೇನೆಂದು ದೇವರ ಮುಂದೆ ಪ್ರತಿಜ್ಞೆಯನ್ನು ಮಾಡಿದ್ದನು (20:1, 2; 21:22-24).

ತಮ್ಮ ದೇಶದಲ್ಲಿ ಪರದೇಶವನಾಗಿದ್ದ ವ್ಯಕ್ತಿಯೊಬ್ಬನ ಸಂಗಡ ಅಮೋರಿಯ ಸಹೋದರರು ಏಕೆ ಒಂದು ಒಡಂಬಡಿಕೆಯನ್ನು ಮಾಡಿಕೊಳ್ಳಲು ಮನಸ್ಸು ಮಾಡಿದ್ದರು? ಈ ಪ್ರಶ್ನೆಗೆ ಬೈಬಲ್ ನಿಖರವಾದ ಉತ್ತರವನ್ನು ಕೊಡುವದಿಲ್ಲ, ಆದರೆ ಈ ನಿರ್ಧಾರವನ್ನು ಕೈಗೊಳ್ಳಲು ಹಲವಾರು ಕಾರಣಗಳು ಇದ್ದಿರಬಹುದಾಗಿದೆ. (1) ಅವರು ಬಹುಶಃ ಅಬ್ರಹಾಮನನ್ನು ಆತನ ಹಿತಾಸಕ್ತಿಗಳನ್ನು ಕಾಪಾಡುವದಕ್ಕೋಸ್ಕರ ಕಾದಾಟವನ್ನು ನಡಿಸಬಲ್ಲ ಬೃಹತ್ ಸಂಖ್ಯೆಯ ಸೇವಕರನ್ನು ಅಥವಾ ದಾಸರನ್ನು ಹೊಂದಿರುವ ಒಬ್ಬ ಶ್ರೀಮಂತ ಮತ್ತು ಶಕ್ತಿಶಾಲಿ ವ್ಯಕ್ತಿ (ಮುಖ್ಯಸ್ಥ ಅಥವಾ ಷೇಖ್) ಎಂಬುದಾಗಿ ಕಂಡಿರಬಹುದಾಗಿದೆ. (2) ಅಬ್ರಹಾಮ ಮತ್ತು ಆತನ ಪರಿವಾರದವರು ಇತ್ತೀಚೆಗಷ್ಟೆ ಐಗುಪ್ತದಿಂದ ಸಾಕಷ್ಟು ಪ್ರಮಾಣದಲ್ಲಿ ದಾಸರನ್ನು, ಬಂಗಾರ, ಮತ್ತು ಪ್ರಾಣಿಗಳ ಸಮೇತ ಹಿಂದಿರುಗಿ ಬಂದಿರುತ್ತಾರೆಂಬುದರ ಕುರಿತು ತಿಳಿದಿದ್ದವರಾಗಿರಬಹುದು, ಐಗುಪ್ತದ ಪ್ರಮುಖನೊಬ್ಬನು, ಸ್ವತಃ ಫರೋಹನೇ ಈತನನ್ನು ಸನ್ಮಾನ ಮಾಡಿರಬಹುದೆನೋ ಎಂದು ಊಹಿಸಿಕೊಂಡಿರಬಹುದು. (3) ಅವರು ಅಬ್ರಹಾಮನಿಗೆ ಭೇಟಿ ಕೊಟ್ಟ ವೇಳೆ, ಅಬ್ರಹಾಮನು ಅವರಿಗೆ ದೇವರು ತನ್ನನ್ನು ಹೇಗೆ ಮೆಸಪೋತಾಮ್ಯವನ್ನು ತೊರೆದು ಕಾನಾನ್ ದೇಶಕ್ಕೆ ಹೋಗಬೇಕೆಂದು, ಅಲ್ಲಿ ಆತನು ಅಬ್ರಹಾಮನನ್ನು ಮತ್ತು ಆತನ ಸಂತತಿಯವರನ್ನು ಆಶೀರ್ವದಿಸುವೆನೆಂದು ಮಾತ್ರವೇ ಅಲ್ಲ, ಆದರೆ ಈತನು ಅಲ್ಲಿ ಸಂಧಿಸುವವರಿಗೆ ಸಹ ಒಂದು ಆಶೀರ್ವಾದವಾಗಿರುವನು ಎಂದು ಹೇಳಿದ್ದಾನೆ ಎಂಬ ಕಥೆಯನ್ನು ಇವರಿಗೆ ತಿಳಿಸಿರಬಹುದಾಗಿದೆ. ಇವುಗಳಲ್ಲಿ ಯಾವದಾದರೂ ಒಂದು ಅಥವಾ ಎಲ್ಲವುಗಳು ಸಹ ಅಮೋರಿಯ ಸಹೋದರರು ಅಬ್ರಹಾಮನ ಸಂಗಡ ಒಡಂಬಡಿಕೆಯನ್ನು ಮಾಡಿಕೊಳ್ಳಲು, ಆತನೊಂದಿಗೆ ಯುದ್ಧದಲ್ಲಿ ಪಾಲ್ಗೊಳ್ಳಲು, ಮತ್ತು ಅವರ ಪರವಾಗಿ ಆತನು ಮಧ್ಯಸ್ಥಿಕೆ ವಹಿಸಿ ಕೊಡಿಸಬಹುದಾದ ಆಶೀರ್ವಾದಗಳಲ್ಲಿ ಪಾಲು ಹೊಂದಬೇಕೆಂದು ಬಯಸುವಂತೆ ಮಾಡಿರಬಹುದಾಗಿದೆ (ನೋಡಿರಿ 14:19, 20, 24).

**ವಚನ 14.** ಅಬ್ರಹಾಮನು **ತನ್ನ ತಮ್ಮನ ಮಗನಾದ**[15] ಲೋಟನು (ಮಾತ್ರವಲ್ಲದೆ ಆತನ ಕುಟುಂಬ ಹಾಗೂ ಸ್ವತ್ತುಗಳೆಲ್ಲಾ) **ಸೆರೆಗೆ ಸಿಕ್ಕಿದ್ದನ್ನು ಕೇಳಿದ** ತಕ್ಷಣ, ಆತನು ಬಿಕ್ಕಟ್ಟಿಗೆ ಪ್ರತಿಕ್ರಿಯಿಸಿದನು ಮತ್ತು **ಶಿಕ್ಷಿತರಾದ ಆಳುಗಳನ್ನು** ಮುಂದಾಳತ್ವ ವಹಿಸಿ ಕರೆದೊಯ್ದನು. "ಶಿಕ್ಷಿತರಾದ" ಎಂಬುದನ್ನು ಅನುವಾದಿಸಿರುವ ಇಬ್ರಿಯ ಪದವು חָנִיךְ *(ಚಾನಿಕ್)*, ಮತ್ತು ಇದು

ಹಳೆಯ ಒಡಂಬಡಿಕೆಯಲ್ಲಿ ಒಂದೇ ಒಂದು ಸಾರಿ ಕಾಣಿಸಿಕೊಂಡಿರುತ್ತದೆ. ಈ ಪದವು "ಆಯುಧ ಧಾರಕರ" ನ್ನು ಸೂಚಿಸುತ್ತದೆ, ಅಬ್ರಹಾಮನ ಕಾಲಕ್ಕೆ (ಕ್ರಿ.ಪೂ. ಎರಡನೆಯ ಸಹಸ್ರಮಾನದ ಆರಂಭಿಕ ಭಾಗದ ವೇಳೆ) ಸೇರಿದ ಐಗುಪ್ತದ ಖಂಡನೆಯ ಬರಹಗಳಲ್ಲಿರುವ ಸಣ್ಣಪುಟ್ಟ ರಾಜರೊಂದಿಗಿದ್ದ ಫಿಲಿಷ್ಟಿಯದವರೊಂದಿಗೆ ಸಂಬಂಧ ಹೊಂದಿರುವವರ ರೀತಿಯಲ್ಲಿ ಇವರಾಗಿದ್ದಾರೆ.[16] ಹೇಗೂ, ಇಲ್ಲಿ 318 ಜನರು ಅಬ್ರಹಾಮನಿಂದ ಬಾಡಿಗೆಗೆ ಕರೆ ತರಲ್ಪಟ್ಟಿದ್ದ ದುಡ್ಡಿಗಾಗಿ ಹೋರಾಡುವ ವ್ಯಕ್ತಿಗಳಾಗಿರಲಿಲ್ಲ. ಅದಕ್ಕೆ ತದ್ವಿರುದ್ಧವಾಗಿ, ಅವರು **ತನ್ನ ಮನೆಯಲ್ಲೇ ಹುಟ್ಟಿ ಬೆಳೆದ** ಆತನ ದಾಸರಾಗಿದ್ದರೆಂಬುದು ಸ್ಪಷ್ಟವಾಗಿರುತ್ತದೆ; ಅವರ ಹೆತ್ತವರು ತಮ್ಮ ಯಜಮಾನನ ಸಂಗಡ ಮೆಸಪೋತಾಮ್ಯದಿಂದ ಕಾನಾನಿಗೆ ಪ್ರಯಾಣಿಸುವದಕ್ಕಿಂತ ಮುಂಚೆ ಬಹಳ ವರ್ಷಗಳಿಂದಲೂ ಆತನ ಸೇವೆಯನ್ನು ಮಾಡಿರಬಹುದಾಗಿದೆ. ಈ ದಾಸರನ್ನು ಅಬ್ರಹಾಮನು ಐಗುಪ್ತದಲ್ಲಿ ಫರೋಹನಿಂದ ಬಹುಮಾನವಾಗಿ ಪಡೆದುಕೊಂಡಿದ್ದ ದಾಸರಿಂದ ಪ್ರತ್ಯೇಕವಾಗಿ ಗುರುತಿಸತಕ್ಕದ್ದು, ಯಾಕೆಂದರೆ ಐಗುಪ್ತರು ಕೇವಲ ಸ್ವಲ್ಪ ಕಾಲದಿಂದ ಮಾತ್ರವೇ ಆತನ ಸಂಗಡವಿದ್ದರು. ಮೂಲಪಿತೃವು ಶ್ರೀಮಂತನಾಗಿದ್ದದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನು ಒಬ್ಬ ಶಕ್ತಿಶಾಲಿ ಮುಖ್ಯಸ್ಥನು (ಷೇಖ್) ಸಹ ಆಗಿದ್ದನು. ಬಹುಶಃ ಆತನ ಬಳಿಯಲ್ಲಿ ಒಂದು ಸಾವಿರಕ್ಕೂ ಅಧಿಕ ಜನರ ಪರಿವಾರವು ಇತ್ತು. ಆತನ 318 ಶಿಕ್ಷಿತರಾದ ಹೋರಾಟಗಾರರು ಮಹತ್ವಪೂರ್ಣವಾದ ಯುದ್ಧವೀರರ ತಂಡವಾಗಿದ್ದರು.

ಅಬ್ರಹಾಮ ಮತ್ತು ಆತನ ಜನರು **ಹೊರಟು ಆ ರಾಜರನ್ನು ದಾನೂರಿನವರೆಗೆ ಹಿಂದಟ್ಟಿದರು**. ದಾನ ಎಂಬುದಕ್ಕೆ ಈ ಮುಂಚೆ ಇದ್ದ ಹೆಸರು "ಲಾಯಿಶ್" (ಅಥವಾ "ಲೆಶೆಮ್") ಎಂದಾಗಿತ್ತು. ನ್ಯಾಯಸ್ಥಾಪಕರ ಕಾಲದ ವೇಳೆ ದಾನ್ ಗೋತ್ರದವರು ಪಟ್ಟಣವನ್ನು ಸ್ವಾಧೀನಪಡಿಸಿಕೊಂಡ ಬಳಿಕವಷ್ಟೆ ಅದಕ್ಕೆ ಒಂದು ಹೊಸ ಹೆಸರನ್ನು ಕೊಟ್ಟರು (ನ್ಯಾಯಸ್ಥಾಪಕ 18:29; ನೋಡಿರಿ ಯೆಹೋಶುವ 19:47). ಅದಾಗಿ ಕೆಲ ಸಮಯದ ಬಳಿಕ, ಒಬ್ಬ ಹಸ್ತಪ್ರತಿ ಲೇಖಕನು ಆದಿಕಾಂಡದ ವಾಕ್ಯದಲ್ಲಿ "ಲಾಯಿಶ್" ಎಂಬುದರಿಂದ "ದಾನ್" ಎಂಬುದಾಗಿ ಆಧುನೀಕರಣಗೊಳಿಸಿದನು, ಹೀಗೆ ಅಬ್ರಹಾಮನ ಕಾಲದಲ್ಲಿ ಈ ಯುದ್ಧವು ನಿಖರವಾಗಿ ಎಲ್ಲಿ ಸಂಭವಿಸಿತ್ತೆಂಬುದನ್ನು ತಿಳಿಯುವಂತಾಗಬೇಕು ಎಂದಾಗಿತ್ತು.

**ವಚನ 15. ತನ್ನ ದಂಡನ್ನು ಎರಡು ಭಾಗ ಮಾಡಿ**ದವನಾಗಿ, ಅಬ್ರಹಾಮನು ಮತ್ತು ಆತನ ಜನರು ರಾತ್ರಿಯಲ್ಲಿ ಏಕಾಏಕಿ ವೈರಿಗಳ ಮೇಲೆ ದಾಳಿ ಮಾಡಿದರು. ಇಸ್ರಾಯೇಲಿನ ಅನಂತರದ ಇತಿಹಾಸದಲ್ಲಿ, ಗಿದ್ಯೋನನು ಕೇವಲ 300 ಸೈನಿಕರನ್ನಿಟ್ಟುಕೊಂಡು ಮಿದ್ಯಾನ್ಯರನ್ನು ಸೋಲಿಸಿದಾಗ ಇದೇ ತಂತ್ರವನ್ನು ಅನುಸರಿಸಿದ್ದನು (ನ್ಯಾಯಸ್ಥಾಪಕ 7:16–23). ಅಬ್ರಹಾಮನ ಎರಡು ವಿಭಾಗಗಳೊಳಗೆ ಮೂವರು ಅಮೋರಿಯ ಸಹೋದರರು ಸೇರಿದ್ದರು. ಆತನ ಜೊತೆಯವರು ಅವರ ವೈರಿಗಳನ್ನು **ಹೋಬಾ ಊರಿನ ತನಕ ಹಿಂದಟ್ಟಿದರು**, ಅದು **ದಮಸ್ಕ ಪಟ್ಟಣದ ಉತ್ತರ ಕಡೆಯಲ್ಲಿ** ಇತ್ತು.

**ವಚನ 16.** ಆದಿಕಾಂಡದ ಲೇಖಕನು ಮೂಡಣದ ಸೈನ್ಯಗಳನ್ನು ಯಶಸ್ವಿಯಾಗಿ ಹೀನಾಯ ರೀತಿಯಲ್ಲಿ ಪರಾಜಯಗೊಳಿಸಿದ್ದರ ಕುರಿತಾಗಿ ಯಾವದೇ ವಿವರಗಳನ್ನು ತಿಳಿಸುವದಿಲ್ಲ, ಆದರೆ ಹಾರಾನಿನಲ್ಲಿ ದೇವರು ಅಬ್ರಹಾಮನಿಗೆ ಮಾಡಿದ ವಾಗ್ದಾನವನ್ನು ನಾವು ಮರೆಯಕೂಡದು: "ನಿನ್ನನ್ನು ಹರಸುವವರನ್ನು ಹರಸುವೆನು; ನಿನ್ನನ್ನು ಶಪಿಸುವವರನ್ನು ಶಪಿಸುವೆನು" (12:3). ಇಲ್ಲಿ ನಾಲ್ವರ ಪರಾಕ್ರಮಿ ಅರಸರ ಸೈನ್ಯಗಳು ದೇವರಿಂದ ಶಪಿಸಲ್ಪಡುವದು (ಅಬ್ರಹಾಮನ ಸೈನ್ಯಗಳಿಂದ ಸೋಲಿಸಲ್ಪಡುವುದು) ಸ್ಪಷ್ಟವಾಗುತ್ತದೆ ಯಾಕೆಂದರೆ ಲೋಟನನ್ನು ಮತ್ತು ಆತನ ಕುಟುಂಬದವರನ್ನು, ಆತನ ದಾಸರು ಹಾಗೂ

ಸ್ವತ್ತುಗಳ ಸಮೇತವಾಗಿ ಅಪಹರಿಸುವ ಮೂಲಕ ಅಬ್ರಹಾಮನ ವಿಷಯದಲ್ಲಿ ಕೆಟ್ಟದ್ದಾಗಿ ನಡೆದುಕೊಂಡಿದ್ದರು. ಜಯಶಾಲಿಗಳು ಎಲ್ಲಾ ಲೂಟಿಯನ್ನು ಪುನಃ ಹಿಂದಕ್ಕೆ ಪಡೆದುಕೊಂಡರು ಎಂಬುದಾಗಿ ಹೇಳುವ ಮೂಲಕ ಈ ವಿಭಾಗವು ಮುಕ್ತಾಯಗೊಳ್ಳುತ್ತದೆ. ಒಂದು ಅತ್ಯಂಥ ಪ್ರಾಮುಖ್ಯವಾದ ಫಲಿತಾಂಶವು ಏನೆಂದರೆ **ಲೋಟ** ಮತ್ತು **ಅವನ ಆಸ್ತಿಯನ್ನೂ** ಜೊತೆಗೆ ಮೂಡಣದ ಸೈನ್ಯಗಳು ಅಪಹರಿಸಿದ್ದ **ಸ್ತ್ರೀಯರನ್ನೂ ಮಿಕ್ಕಾದವರನ್ನೂ** ಬಿಡಿಸಿಕೊಂಡರು.

## ಅಬ್ರಹಾಮನು ಇಬ್ಬರು ಅರಸರನ್ನು ಭೇಟಿಯಾದದ್ದು (14:17-24)

**[17]ಅವನು ಕೆದೊರ್ಲಗೋಮರನನ್ನೂ ಅವನೊಂದಿಗೆ ಇದ್ದ ರಾಜರನ್ನೂ ಹೊಡೆದು ಬಂದಮೇಲೆ ಸೊದೋಮಿನ ಅರಸನು ಅವನನ್ನು ಅರಸನ ತಗ್ಗು ಎನ್ನಿಸಿಕೊಳ್ಳುವ ಶಾವೆ ತಗ್ಗಿನಲ್ಲಿ ಎದುರುಗೊಂಡನು. [18]ಸಾಲೇಮಿನ ಅರಸನಾದ ಮೆಲ್ಕೀಚೆದೆಕನು ಸಹ ಬಂದು ರೊಟ್ಟಿಯನ್ನೂ ದ್ರಾಕ್ಷಾರಸವನ್ನೂ ಕೊಟ್ಟನು. ಇವನು ಪರಾತ್ಪರನಾದ ದೇವರ ಯಾಜಕನಾಗಿದ್ದು ಅಬ್ರಾಮನನ್ನು ಆಶೀರ್ವದಿಸಿ - [19]ಭೂಮ್ಯಾಕಾಶಗಳನ್ನು ನಿರ್ಮಾಣಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಾಮನಿಗೆ ಆಗಲಿ; [20]ಪರಾತ್ಪರನಾದ ದೇವರು ನಿನ್ನ ಶತೃಗಳನ್ನು ನಿನ್ನ ಕೈಗೆ ಒಪ್ಪಿಸಿದ್ದಕ್ಕಾಗಿ ಆತನಿಗೆ ಸ್ತೋತ್ರ ಎಂದು ಹೇಳಿದನು. ಅಬ್ರಾಮನು ತಾನು ಗೆದ್ದು ತಂದಿದ್ದ ಎಲ್ಲಾ ವಸ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಅವನಿಗೆ ಕೊಟ್ಟನು. [21]ಸೊದೋಮಿನ ಅರಸನು ಅಬ್ರಾಮನಿಗೆ - ನೀನು ಬಿಡಿಸಿದ ಜನರನ್ನು ನನಗೆ ಒಪ್ಪಿಸು; [22, 23]ಆಸ್ತಿಯನ್ನು ನೀನೇ ತಕ್ಕೋ ಎಂದು ಹೇಳಲು ಅಬ್ರಾಮನು ಅವನಿಗೆ - ಒಂದು ದಾರವನ್ನಾಗಲಿ ಕೆರದ ಬಾರನ್ನಾಗಲಿ ನಿನ್ನದರಲ್ಲಿ ಯಾವದನ್ನೂ ತೆಗೆದುಕೊಳ್ಳುವದಿಲ್ಲವೆಂದು ಭೂಮ್ಯಾಕಾಶಗಳನ್ನು ನಿರ್ಮಾಣಮಾಡಿದ ಪರಾತ್ಪರದೇವರಾಗಿರುವ ಯೆಹೋವನ ಕಡೆಗೆ ಕೈಯೆತ್ತಿ ಪ್ರಮಾಣ ಮಾಡುತ್ತೇನೆ. ಅಬ್ರಾಮನು ನನ್ನ ಸೊತ್ತಿನಿಂದಲೇ ಐಶ್ವರ್ಯವಂತನಾದನೆಂದು ಹೇಳಿಕೊಳ್ಳುವದಕ್ಕೆ ನಿನಗೆ ಆಸ್ಪದವಾಗಬಾರದು, ನನಗೆ ಏನೂ ಬೇಡ. [24]ಆಳುಗಳು ತಿಂದದ್ದು ಹೊರತು ನನ್ನ ಜೊತೆಯವರಾದ ಆನೇರ ಎಷ್ಕೋಲ ಮಮ್ರೆಯರಿಗೆ ಬರತಕ್ಕ ಪಾಲು ಮಾತ್ರ ಇರಲಿ ಎಂದು ಹೇಳಿದನು.**

**ವಚನ 17.** ಕಥನದಲ್ಲಿ ಈ ಮುಂಚೆ, **ಸೊದೋಮಿನ ಅರಸನು** ದುರಹಂಕಾರದಿಂದಿದ್ದನು ಮತ್ತು **ಕೆದೊರ್ಲಗೋಮರನನ್ನು** ಯುದ್ಧದಲ್ಲಿ ತೊಡಗಿಸುವದಕ್ಕೆ ಸಿದ್ಧನಾಗಿದ್ದನು (14:8, 9). ಯುದ್ಧವು ಆರಂಭಗೊಂಡ ಬಳಿಕ, ವೈರಿಯಿಂದ ಆತನ ಸೈನ್ಯವು ಹೀನಾಯವಾಗಿ ಪರಾಜಯಗೊಳಿಸಲ್ಪಟ್ಟಿತು, ಆದರೆ ಆತನು ಡಾಂಬರಿನ ಕುಣಿಗಳಲ್ಲಿ ಅಡಗಿಕೊಳ್ಳುವ ಮೂಲಕ ತಪ್ಪಿಸಿಕೊಂಡಿರಬಹುದಾಗಿದೆ (14:8-10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಹೇಗೂ, ಕಥೆಯಲ್ಲಿ ಈ ಹಂತದೊಳಗೆ, ಸೊದೋಮಿನ ಅರಸನು ಹೊರಗೆ ಬಂದನು ಮತ್ತು ಅಬ್ರಹಾಮನ ಎದುರಿನಲ್ಲಿ ಅವಮಾನಗೊಂಡವನಾಗಿ ನಿಂತಿದ್ದನು, ಅಬ್ರಹಾಮನು ಕೆದೊರ್ಲಗೋಮರನನ್ನು ಸೋಲಿಸಿ ಜಯಶಾಲಿಯಾಗಿದ್ದನಷ್ಟೆ.

ಸೊದೋಮಿನ ಅರಸನು ಮತ್ತು ಅಬ್ರಹಾಮನು ಭೇಟಿಯಾದ ಸ್ಥಳವು **ಅರಸನ ತಗ್ಗು ಎನ್ನಿಸಿಕೊಳ್ಳುವ ಶಾವೆ ತಗ್ಗಿನಲ್ಲಿ** ಆಗಿತ್ತು. “ಶಾವೆ” ಎಂದರೆ “ಬಯಲು” ಅಥವಾ “ತಗ್ಗು” ಎಂದರ್ಥ. ಈ ಸ್ಥಳದ ಬಗ್ಗೆ ಉಲ್ಲೇಖಿಸಲ್ಪಟ್ಟಿರುವ ಇನ್ನು ಒಂದೇ ಒಂದು ವಾಕ್ಯವೆಂದರೆ 2 ಸಮುವೇಲ 18:18; ಅಬ್ಷಾಲೋಮನು ತನಗೆ ಮಕ್ಕಳಿಲ್ಲದ ಕಾರಣ ತನ್ನ ಹೆಸರನ್ನು ಸಂರಕ್ಷಿಸುವದಕ್ಕಾಗಿ ಅಲ್ಲಿ ಸ್ತಂಭವೊಂದನ್ನು ನಿಲ್ಲಿಸಿದ್ದನು. ಶಾವೆ ಎಂಬುದು

ಯೆರೂಸಲೇಮಿನಿಂದ ದಕ್ಷಿಣ ಹಾಗೂ ಪೂರ್ವ ದಿಕ್ಕುಗಳಿಗೆ ಸ್ವಲ್ಪ ದೂರದಲ್ಲಿರುವ ಒಂದು ಚಿಕ್ಕ ಬಯಲು ಆಗಿತ್ತೆಂದು ನಂಬಲಾಗಿರುತ್ತದೆ, ಅಲ್ಲಿ ಕಿದ್ರೋನ್, ಹಿನ್ನೋಮ್, ಮತ್ತು ತೈರೊಪೊಯಿನ್ ಕಣಿವೆಗಳು ಒಮ್ಮುಖವಾಗುತ್ತವೆ.[17]

**ವಚನ 18. ಮೆಲ್ಕೀಚೆದೆಕ** ಎಂಬ ಹೆಸರಿನ **ಸಾಲೇಮಿ ಅರಸನು** ಸಹ ಅಬ್ರಹಾಮನನ್ನು ಭೇಟಿಯಾಗುವದಕ್ಕೆ ಬಂದುನು. "ಮೆಲ್ಕೀಚೆದೆಕ" ಎಂಬ ಹೆಸರಿನ ಅಕ್ಷರಶಃ ಅರ್ಥವು "ನೀತಿಯ ರಾಜನು" ಎಂದಾಗಿದೆ; ಮತ್ತು ಆತನ ಗುರುತಾಗಿರುವ, "ಸಾಲೇಮಿನ ಅರಸನು" ಎಂಬುದರ ಅರ್ಥವು "ಸಮಾಧಾನದ ಅಸರನು" ಎಂದಾಗಿದೆ (ಇಬ್ರಿಯ 7:2). ಕೀರ್ತನೆ 76:2ರಲ್ಲಿ, "ಸಾಲೇಮ" ಎಂಬುದು ಯೆರೂಸಲೇಮಿಗೆ ಇದ್ದ ಆರಂಭಿಕ ಹೆಸರಾಗಿದ್ದು, ಅದು "ಚೀಯೋನ್" ಜೊತೆಯಲ್ಲಿ ಪರ್ಯಾಯ ಸಮಾನಾರ್ಥದಲ್ಲಿ ಕಾಣಿಸಿಕೊಳ್ಳುತ್ತದೆ. ದಾವೀದನು ಮತ್ತು ಆತನ ಯುದ್ಧವೀರರು ಯೆಬೂಸಿಯರ ಕೋಟೆಯಾದ ಚೀಯೋನನ್ನು ಸ್ವಾಧೀನಪಡಿಸಿಕೊಂಡು ಅಲ್ಲಿ ತನ್ನ ಅರಮನೆಯನ್ನು ಕಟ್ಟಿದಾಗ, ಆತನು ಅದನ್ನು "ದಾವೀದನಗರ" ಎಂದು ಕರೆದನು (2 ಸಮುವೇಲ 5:7, 9; 1 ಪೂರ್ವಕಾಲವೃತ್ತಾಂತ 11:5, 7). ಸೊಲೊಮೋನನ ಕಾಲದಲ್ಲಿ, ದಾವೀದನ ನಗರವು ನಿರ್ದಿಷ್ಟವಾಗಿ "ಚೀಯೋನ್" ಎಂದು ಗುರುತಿಸಲ್ಪಟ್ಟಿರುತ್ತದೆ (1 ಅರಸು 8:1).

ಆಕ್ರಮಣ ಮಾಡಿದ್ದ ಅರಸರ ವಿರುದ್ಧ ಅಬ್ರಹಾಮನು ಜಯವನ್ನು ಗಳಿಸಿದ್ದಕ್ಕಾಗಿ ಮೆಲ್ಕೀಚೆದೆಕನು ಕೃತಜ್ಞತೆಯುಳ್ಳವನಾಗಿದ್ದನು, ಆದ್ದರಿಂದ ಆತನು ಕೃಪಾಭರಿತವಾಗಿ ಯುದ್ಧದ ಬಳಿಕ ಮನೆಯ ಕಡೆಗೆ ದೀರ್ಘವಾದ ಪ್ರಯಾಣವನ್ನು ಮಾಡುತ್ತಲಿದ್ದ ಸೈನಿಕರ ಆಯಾಸವನ್ನು ನೀಗಿಸುವದಕ್ಕಾಗಿ **ರೊಟ್ಟಿಯನ್ನೂ ದ್ರಾಕ್ಷಾರಸವನ್ನೂ** ತಂದನು. ರೊಟ್ಟಿ ಮತ್ತು ನೀರು ಸೈನಿಕರಿಗೆ ಕೊಡಲ್ಪಡುತ್ತಿದ್ದ ಸಾಮಾನ್ಯ ವಸ್ತುಗಳಾಗಿದ್ದರೆ, ರೊಟ್ಟಿ ಮತ್ತು ದ್ರಾಕ್ಷಾರಸಳು ಅರಸರಿಗೆ ಒದಗಿಸಲ್ಪಡುತ್ತಿದ್ದವು (1 ಸಮುವೇಲ 16:20). ಅಲ್ಲದೆ, ಈ ಪದಾರ್ಥಗಳು ನಿಯತಕ್ರಮವಾಗಿ ಪ್ರಾಣಿ ಯಜ್ಞಗಳ ಸಂಗಡ ಅರ್ಪಿಸಲ್ಪಡುತ್ತಿದ್ದವು (ಅರಣ್ಯಕಾಂಡ 15:2–10; ಧರ್ಮೋಪದೇಶಕಾಂಡ 14:22–26; 1 ಸಮುವೇಲ 1:14; 10:3). ಮೆಲ್ಕೀಚೆದೆಕನು ಅಬ್ರಹಾಮ ಮತ್ತು ಆತನ ಜನರಿಗೆ ರಾಜವಂಶದ ಪದಾರ್ಥಗಳನ್ನು ನೀಡಿ ಸತ್ಕರಿಸಿದ್ದು ಆತನ ಗುಣಸ್ವಭಾವದ ಕುರಿತಾಗಿ ನಮಗೆ ವಿಷಯವೊಂದನ್ನು ತಿಳಿಸುವದಾಗಿದೆ. ಆತನು ಒಳ್ಳೆಯವನು ಮತ್ತು ನೀತಿಯುಳ್ಳ ಅರಸನಾಗಿದ್ದು, ಬೇರೆಯವರನ್ನು ಕಾಪಾಡುವದಕ್ಕೋಸ್ಕರ ತಮ್ಮ ಪ್ರಾಣದ ಹಂಗನ್ನು ಸಹ ತೊರೆದು ಅಷ್ಟೊಂದು ದೀರ್ಘವಾದ ಹಾಗೂ ಅಪಾಯಕಾರಿ ನಿಯೋಗದಲ್ಲಿ ತೊಡಗಿಸಿಕೊಳ್ಳುವದಕ್ಕೆ ಮನಸ್ಸುಳ್ಳವರನ್ನು ಆತನು ನಿಜಕ್ಕೂ ಸನ್ಮಾನಿಸಲು ಬಯಸಿದ್ದನು.

ಒಬ್ಬ ಅರಸನಾಗಿರುವದರ ಜೊತೆಗೆ, ಮೆಲ್ಕೀಚೆದೆಕನು **ಪರಾತ್ಪರನಾದ** [אֵל עֶלְיוֹן, *ಎಲ್ ಎಲಿಯೋನ್*] **ದೇವರ ಯಾಜಕನಾಗಿದ್ದನು**. *ಎಲ್* ಎಂಬುದು "ದೇವರು" ಎಂದು ಹೇಳುವದಕ್ಕೆ ಬಳಸುವ ಇಬ್ರಿಯ ಪದ, *ಎಲಿಯೋನ್* ಎಂಬುದಾದರೋ "ಪರಾತ್ಪರನು" ಎಂದು ಅರ್ಥವನ್ನು ನೀಡುವ ತಮರೂಪದ ಗುಣವಾಚಕವಾಗಿರುತ್ತದೆ. ಇತರ ಸನ್ನಿವೇಶಗಳಲ್ಲಿ, ಈ ಎರಡನೆಯ ಪದವು "ಉನ್ನತ," "ಸರ್ವೋನ್ನತ," ಮತ್ತು "ಉನ್ನತಕ್ಕೇರಿಸಲ್ಪಟ್ಟ" ಸಂಗತಿಯನ್ನು ಸೂಚಿಸುತ್ತದೆ.[18] ಆದದರಿಂದ, ಇದು ದೇವರಿಗೆ ಇರುವ ಒಂದು ತಕ್ಕದಾದ ಬಿರುದು ಆಗಿರುತ್ತದೆ, ಆತನು ಆಕಾಶ ಮತ್ತು ಭೂಮಿಗಳ ಮೇಲೆ ಸಾರ್ವಭೌಮನಾಗಿರುತ್ತಾನೆ.

ಕಾನಾನ್ಯರ ದೇವರೊಬ್ಬನು "ಎಲ್" ಎಂಬುದಾಗಿ ಕರೆಯಲ್ಪಡುತ್ತಿದ್ದನು ಮತ್ತು "ಎಲಿಯೋನ್" ಎಂಬುದು ಮತ್ತೊಬ್ಬ ದೇವರ (ಆತನ ಮೊಮ್ಮಗನ) ಹೆಸರಾಗಿತ್ತೆಂಬ

ಕಾರಣದಿಂದಾಗಿ, ಮೆಲ್ಕೀಚೆದೆಕನನನ್ನು "ಎಲ್ ಎಲಿಯೋನ್" ಎಂಬ ಹೆಸರಿನ ದೇವರನ್ನು ಆರಾಧಿಸುತ್ತಿದ್ದ ಅನ್ಯಧರ್ಮಿಯ ಯಾಜಕನು ಎಂಬುದಾಗಿ ಚಿತ್ರಿಸಲ್ಪಟ್ಟಿರುತ್ತಾನೆ. ಈ ಅಭಿಪ್ರಾಯದಲ್ಲಿ ಇರುವಂಥ ಸಮಸ್ಯೆಯು ಏನೆಂದರೆ ಕಾನಾನ್ಯರ ಪುರಾಣದಲ್ಲಿ ಎಲ್ ಮತ್ತು ಎಲಿಯೋನ್ ಎಂಬುವರು ಇಬ್ಬರು ಭಿನ್ನವಾದ ದೇವತೆಗಳಾಗಿದ್ದರು, ಮತ್ತು ಅವರ ಸಾಹಿತ್ಯದಲ್ಲಿ ಈ ಹೆಸರನ್ನು ಹೊಂದಿರುವ ಏಕ ದೇವರ ಕುರಿತು ಯಾವದೇ ಪುರಾವೆಯು ಇರುವದಿಲ್ಲ.[19] ದೇವರ ಈ ಯಾಜಕನು ಒಬ್ಬ ವೈಶಿಷ್ಟ್ಯವಾದ ಕಾನಾನ್ಯರ ಅರಸನಾಗಿದ್ದಲ್ಲಿ, ಆತನು ತನ್ನ ದೇವರುಗಳೊಬ್ಬನ ಹೆಸರಿನಲ್ಲಿ ಆಶೀರ್ವಾದ ಕೊಡುವದನ್ನು ನಿರೀಕ್ಷಿಸಲಾಗಿರುತ್ತಿತ್ತೇ ಹೊರತು ಅಬ್ರಹಾಮನಿಗೆ ಮತ್ತು ಆತನ ಸಂಗಡವಿದ್ದ ಅಮೋರಿಯ ಸಹೋದರರಿಗೆ ಗೊತ್ತಿಲ್ಲದಂಥ ದೇವರೊಬ್ಬನ ಹೆಸರಿನಲ್ಲಿ ಅಲ್ಲ. ಅಷ್ಟುಮಾತ್ರವಲ್ಲದೆ, ನಿಜವಾದ ನೀತಿ ಮತ್ತು ಸಮಾಧಾನಗಳ ಅರಸನಾದ ಮೆಸ್ಸೀಯನಿಗೆ ಒಂದು ಛಾಯೆ ಎಂಬುದಾಗಿ ಮೆಲ್ಕೀಚೆದೆಕನು ಘನತೆಗೇರಿಸಲ್ಪಡುವದಕ್ಕೆ ಅತ್ಯಂಥ ಅಸಾಧ್ಯವಾಗಿರುತ್ತಿತ್ತು (ಕೀರ್ತನೆ 110:1-4; ಇಬ್ರಿಯ 7:1-4, 17, 21), ಅಬ್ರಹಾಮನು ಆತನನ್ನು ಭೇಟಿಯಾಗುವದಕ್ಕೆ ಮುನ್ನ ಆತನು ಈ ಗುಣಗಳುಳ್ಳವನೆಂದು ಪ್ರಸಿದ್ಧನಾಗಿದ್ದಲ್ಲಿ ಮಾತ್ರವೇ ಅದು ಸಾಧ್ಯವಾಗುತ್ತಿತ್ತು. ಅರಸನು ಹೇಗೆ ಸತ್ಯ ದೇವರನ್ನು ಅರಿತುಕೊಂಡಿದ್ದನು ಎಂಬುದರ ಬಗ್ಗೆ ಕಥನವು ತಿಳಿಸುವದಿಲ್ಲ; ಆದರೆ ಯೆಹೋವನು ಅಬ್ರಹಾಮನಿಗೆ (12:1-3; ಅಪೊಸ್ತಲರ ಕೃತ್ಯಗಳು 7:2-4) ಮತ್ತು ಶತಮಾನಗಳ ಬಳಿಕ ಬಿಳಾಮನಿಗೆ (ಅರಣ್ಯಕಾಂಡ 22:1-24:25) ತನ್ನನ್ನು ಪ್ರಕಟಪಡಿಸಿಕೊಂಡಿದ್ದ ಪ್ರಕಾರವೇ, ಈತನಿಗೂ ಯೆಹೋವನು ತನ್ನನ್ನು ಪ್ರಕಟಗೊಳಿಸಿಕೊಂಡಿರಬಹುದು.

**ವಚನ 19.** ಮೆಲ್ಕೀಚೆದೆಕನು ಅಬ್ರಹಾಮನಿಗೆ ಒಂದು ಆಶೀರ್ವಾದ ನುಡಿಯನ್ನು ಉಚ್ಛರಿಸುತ್ತಾ ಹೀಗೆ ಹೇಳಿದನು, **ಭೂಮ್ಯಾಕಾಶಗಳನ್ನು ನಿರ್ಮಾಣಮಾಡಿದ ಪರಾತ್ಪರನಾದ ದೇವರ ಆಶೀರ್ವಾದವು ಅಬ್ರಾಮನಿಗೆ ಆಗಲಿ.** ಮೆಲ್ಕೀಚೆದೆಕನು ಅಬ್ರಹಾಮನಿಗೆ ನೀಡಿದ ಆಶೀರ್ವಾದವು ಸೂಚಿಸುವದೇನೆಂದರೆ, ದೇವರ ಒಬ್ಬ ಯಾಜಕನಾಗಿ ಮತ್ತು "ನೀತಿರಾಜ" ನಾಗಿ (ಇಬ್ರಿಯ 7:2), ಆತನು ಯೆಹೂದಿ ಜನರ ಪಿತೃವಿಗಿಂತಲೂ ದೊಡ್ಡವನಾಗಿದ್ದನು. ರಬ್ಬಿಗಳು ಇದನ್ನು ಅರ್ಥಮಾಡಿಕೊಳ್ಳದೆ ಹೋರಾಟ ಅನುಭವಿಸಿದರು, ಮತ್ತು ಕೆಲವರು ಮೆಲ್ಕೀಚೆದೆಕನ ಯಾಜಕತ್ವವನ್ನು ಅಬ್ರಹಾಮನಿಗಿಂತ ಕೆಳದರ್ಜೆಗೆ ತಳ್ಳಿದರು. ಇನ್ನು ಕೆಲವರು ಆತನನ್ನು ಘನತೆಗೇರಿಸಿ, ಅವನು ಒಬ್ಬ ದೇವದೂತನು, ಸಂಭಾವ್ಯವಾಗಿ ಪ್ರಧಾನದೂತನಾದ ಮಿಕಾಯೇಲ[20] ಆಗಿದ್ದನು ಎಂದು ನಂಬಿದರು. ಹೇಗೂ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಹೇಳಿದ್ದೇನೆಂದರೆ, ಈತನು ಒಬ್ಬ ದೈವಿಕ ಜೀವಿಯಾಗಿರಲಿಲ್ಲ ಆದರೆ ಒಬ್ಬ ಶ್ರೇಷ್ಠ "ಮನುಷ್ಯನು" ಆಗಿದ್ದನು, ಆತನ ವಂಶಸ್ಥರು (ಪೂರ್ವಜರು ಹಾಗೂ ಸಂತತಿಯವರು) ಯೆಹೂದ್ಯರಿಗೆ ಅಪರಿಚಿತವಾಗಿದ್ದರು (ಇಬ್ರಿಯ 7:3, 4). ಹೀಗೆ ವಂಶಾವಳಿಯು ಇಲ್ಲದಿರುವಿಕೆಯು ಯಾಜಕತ್ವವನ್ನು ನಿರ್ಧರಿಸುವದಕ್ಕೆ ವಂಶ ಪರಂಪರೆಯು ಪ್ರಮುಖ ಕಾರಣಾಂಶವಾಗಿರುತ್ತದೆಂದು ನಂಬುವವರ ದೃಷ್ಟಿಯಲ್ಲಿ ಈತನನ್ನು ಕಡಿಮೆಯವನನ್ನಾಗಿ ಮಾಡಿತ್ತು.

ಹಳೆಯ ಒಡಂಬಡಿಕೆಯ ಪ್ರಕಾರವಾಗಿ, ಆಶೀರ್ವದಿಸುವವನು ಯಾಜಕನಾಗಿರಬಹುದು ಅಥವಾ ಒಬ್ಬ ಅರಸನಾಗಿರಬಹುದು, ಈತನೇ ಆಶೀರ್ವದಿಸಲ್ಪಡುವವರಿಗಿಂತ ದೊಡ್ಡವಾಗಿರುತ್ತಿದ್ದನು (ವಿಮೋಚನಕಾಂಡ 39:43; ಅರಣ್ಯಕಾಂಡ 6:22-27; ಧರ್ಮೋಪದೇಶಕಾಂಡ 10:8; 2 ಸಮುವೇಲ 6:18). ಮೆಲ್ಕೀಚೆದೆಕನು ಅಬ್ರಹಾಮನಿಗಿಂತ

ಶ್ರೇಷ್ಠನು ಎಂಬ ವಿವಾದವಿಲ್ಲದಂಥ ಸೂಚನೆಯು ಇಬ್ರಿಯ 7:7ರಲ್ಲಿನ "ಆಶೀರ್ವಾದ ಹೊಂದುವವನಿಗಿಂತ ಆಶೀರ್ವದಿಸುವವನು ದೊಡ್ಡವನು" ಎಂಬ ಹೇಳಿಕೆಯಲ್ಲಿ ಸ್ಪಷ್ಟವಾಗಿರುತ್ತದೆ. ಆದದರಿಂದ, ಇಬ್ರಿಯರಿಗೆ ಪತ್ರಿಕೆಯ ಲೇಖಕನು ಮೆಲ್ಕೀಚೆದೆಕನ ಶ್ರೇಷ್ಠತೆಯು ಯಾವದೇ ಶಾರೀರಿಕ, ರಾಜಕೀಯ, ಅಥವಾ ಆರ್ಥಿಕ ಪರಿಗಣನೆಗಳ ಕಾರಣದಿಂದಾಗಿ ಎಂದು ಹೇಳುವದಿಲ್ಲ; ಬದಲಾಗಿ, ನೀತಿಯ ರಾಜನಾಗಿ ಮತ್ತು ಪರಾತ್ಪರನ ಯಾಜಕನಾಗಿ, ಆತನು ಅಬ್ರಹಾಮನಿಗಿಂತ ಆತ್ಮೀಕವಾಗಿ ಶ್ರೇಷ್ಠನಾಗಿದ್ದನು. ಮೂಲಪಿತೃವು 14:22ರಲ್ಲಿ "ಯೆಹೋವ" ಎಂಬ ಹೆಸರನ್ನು ಬಳಸಿದಾಗ, ಕೆಲವರು ನಂಬುವ ಪ್ರಕಾರ ಆತನು ಅಲ್ಲಿ ಸಾಲೇಮಿನ ರಾಜನಿಗೆ ಸತ್ಯ ದೇವರ ಗುರುತನ್ನು ಕುರಿತು ಉಪದೇಶಿಸುತ್ತಿರಲಿಲ್ಲ. ಆತನು ಯೆಹೋವನ ವೈಯಕ್ತಿಕ ಹೆಸರನ್ನು ಬಳಸುತ್ತಿದ್ದಾನಷ್ಟೇ. ಹೀಗಿದ್ದರೂ, ಮೆಲ್ಕೀಚೆದೆಕನು ಪರಾತ್ಪರನಾದ ಏಕೈಕ ಸತ್ಯ ದೇವರಿಗೆ ಯಾಜಕನಾಗಿ ಸೇವೆ ಮಾಡುತ್ತಿದ್ದಾಗ್ಯೂ, ಆತನಿಗೆ ಈ ಬಿರುದು ಗೊತ್ತಿಲ್ಲದೆ ಇದ್ದಿರಬಹುದಾಗಿದೆ.

ಈ ನೀತಿಯ ರಾಜನಿಂದ ಅಬ್ರಹಾಮನು ಸನ್ಮಾನಿಸಲ್ಪಡುವಿಕೆಯನ್ನು, ಲೋಟ, ಆತನ ಜನರು, ಮತ್ತು ಆತನ ಸ್ವತ್ತುಗಳನ್ನೆಲ್ಲಾ ಅಪಹರಿಸಿದ್ದ ಮೂಡಣದ ಅರಸರ ವಿಷಯದಲ್ಲಿ ಅಬ್ರಹಾಮನು ನಡೆದುಕೊಂಡ ರೀತಿಗೆ ವಿರುದ್ಧ ಹೋಲಿಕೆಯಲ್ಲಿ ಕಾಣತಕ್ಕದ್ದು. 14:14-16ರಲ್ಲಿ ತಿಳಿಸಲ್ಪಟ್ಟ ಪ್ರಕಾರವಾಗಿ, ಮೂಡಣದ ಅರಸರು ಅಬ್ರಹಾಮನ ತಮ್ಮನ ಮಗನ ಮೇಲೆ ದಬ್ಬಾಳಿಕೆ ಮಾಡುವ ಮೂಲಕ ಆತನನ್ನು "ಶಪಿಸಿದ್ದರು." ಶಕ್ತಿಶಾಲಿ ವ್ಯಕ್ತಿಗಳು - 12:17, 18ರಲ್ಲಿ ಫರೋಹನ ರೀತಿಯಲ್ಲಿ - ಅಬ್ರಹಾಮನ ಸಂಗಡ ಸಮಾಧಾನದ ಸಂಬಂಧವನ್ನಿಟ್ಟುಕೊಳ್ಳದ ಕಾರಣದಿಂದ ತಮ್ಮ ಮೇಲೆ ಶಾಪವನ್ನು ಬರಮಾಡಿಕೊಂಡದ್ದಕ್ಕೆ ಇದು ಮತ್ತೊಂದು ಉದಾಹರಣೆಯಾಗಿದೆ. ಹೇಗೂ, ಮೆಲ್ಕೀಚೆದೆಕನು ಆತನನ್ನು "ಹರಸಿದನು." ಆತನು ಅಬ್ರಹಾಮನನ್ನು ಹರಸಿದ್ದು ಆತನು ಮೂಡಣದ ಅರಸನನ್ನು ಬೆನ್ನತ್ತಿ, ಧೈರ್ಯದಿಂದ ಆಕ್ರಮಣ ಮಾಡಿ, ಅವರನ್ನು ಸೋಲಿಸಿದ್ದಕ್ಕೆ ಕೃತಜ್ಞತೆಯನ್ನು ವ್ಯಕ್ತಪಡಿಸುವಿಕೆಯಾಗಿತ್ತು, ಅಬ್ರಹಾಮನ ಆ ಕೃತ್ಯದಿಂದ ಬಂಧಿಗಳು ಬಿಡಿಸಲ್ಪಟ್ಟು ಅವರ ಸ್ವತ್ತುಗಳನ್ನು ಪುನಃ ಪಡೆದುಕೊಳ್ಳುವಂತೆ ಸಾಧ್ಯವಾಗಿತ್ತು.

ಮೆಲ್ಕೀಚೆದೆಕನು ಅಬ್ರಹಾಮನನ್ನು "ಪರಾತ್ಪರನಾದ ದೇವರ" ಹೆಸರಿನಲ್ಲಿ ಆಶೀರ್ವದಿಸಿದನು, ಆತನನ್ನು "ಭೂಮ್ಯಾಕಾಶಗಳ ಒಡೆಯ ನಿರ್ಮಾಣ" ಎಂದು ಗುರುತಿಸಿದನು. "ನಿರ್ಮಾಣ ಮಾಡಿದವನು" ಎಂಬುದನ್ನು ಅನುವಾದಿಸಿರುವ קֹנֵה (*ಕ್ವಾನಾಹ*) ಎಂಬ ಪದವು ಹಳೆಯ ಒಡಂಬಡಿಕೆಯಲ್ಲಿ ಅನೇಕ ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ಸಾಮಾನ್ಯವಾಗಿ ಸ್ವತ್ತನ್ನು "ಹೊಂದಿಕೋ," "ಸ್ವಾಧೀನಪಡಿಸಿಕೋ" ಎಂದರ್ಥವಾಗಿರುತ್ತದೆ.[21] R. Laird Harrisನ ಪ್ರಕಾರವಾಗಿ, *ಕ್ವಾನಾಹ* ಎಂಬುದು ಕೆಲವು ಸ್ಥಳಗಳಲ್ಲಿ "ಸೃಷ್ಟಿಸು" ಎಂಬ ಅರ್ಥದಲ್ಲಿ ಸಹ ಕಾಣಿಸಿಕೊಳ್ಳುತ್ತದೆ (14:19, 22; ಧರ್ಮೋಪದೇಶಕಾಂಡ 32:6; ಕೀರ್ತನೆ 139:13; ಜ್ಞಾನೋಕ್ತಿ 8:22).[22] "ಒಡೆಯನು" (NASB) ಎಂಬುದರ ಬದಲಾಗಿ, ಬಹುಪಾಲು ತರ್ಜುಮೆಗಳು "ನಿರ್ಮಾಣ ಮಾಡಿದವನು" ಎಂಬ ಪದವನ್ನು ಬಳಸುತ್ತವೆ (NIV; NEB; REB; NAB; NJB; NJPSV; CEV; NLT), ಅದು ಈ ಸನ್ನಿವೇಶದಲ್ಲಿ ಹೆಚ್ಚು ಸ್ವಾಭಾವಿಕವಾದ ಅರ್ಥವಾಗಿರಬಹುದಾಗಿದೆ. ಇಲ್ಲಿ ಯಾವದೇ ಮಹತ್ವಪೂರ್ಣವಾದ ಸಿದ್ಧಾಂತವು ಪಣಕ್ಕೀಡಲ್ಪಟ್ಟಿರುವದಿಲ್ಲ, ಯಾಕೆಂದರೆ ಎರಡೂ ಪದಗಳು ಸಹ ದೇವರ ಕುರಿತಾಗಿ ಸತ್ಯವಾದ ಅಭಿಪ್ರಾಯ ತಿಳಿಸುತ್ತವೆ. ದೇವರು ಆಕಾಶ ಮತ್ತು ಭೂಮಿಗಳ ಸೃಷ್ಟಿಕರ್ತನು, ಆದ್ದರಿಂದ ಆತನು ತನ್ನ ಸೃಷ್ಟಿಯ ಒಡೆಯನು ಸಹ ಹೇಗೆ ಆಗಿರದೆ ಇರಲು

ಸಾಧ್ಯ? ಅದೇ ರೀತಿಯಲ್ಲಿಯೇ, ದೇವರು ಆಕಾಶ ಮತ್ತು ಭೂಮಿಗಳ ಒಡೆಯನು, ಆದ್ದರಿಂದ ಆತನು ಹೇಗೆ ಅದರ ಸೃಷ್ಟಿಕರ್ತನು ಸಹ ಆಗಿರದೆ ಇರಲು ಸಾಧ್ಯ? ದೈವಶಾಸ್ತ್ರೀಕವಾದ ಒಂದು ದೃಷ್ಟಿಕೋನದಿಂದ ನೋಡುವದಾದರೆ, ಇವುಗಳಲ್ಲೊಂದು ಅಥವಾ ಎರಡೂ ಅನುವಾದಗಳನ್ನು ನಿಖರವಾದವುಗಳೆಂದು ಕಾಣತಕ್ಕದ್ದು ಯಾಕೆಂದರೆ ದೇವರು ಸರ್ವಶಕ್ತನೂ ತನ್ನ ಸೃಷ್ಟಿಯನ್ನು ಪೋಷಣೆ ಮಾಡುವ ಒಡೆಯನೂ ಆಗಿರುವನು.

**ವಚನ 20.** ಮೆಲ್ಕೀಚೆದೆಕನು ತನ್ನ ಆಶೀರ್ವಾದವನ್ನು ಮುಂದುವರೆಸುತ್ತಾನೆ. ಅಬ್ರಹಾಮನು ತನ್ನ ಸ್ವಂತ ಚಾತುರ್ಯದಿಂದ ಜಯವನ್ನು ಗಳಿಸಿಲ್ಲ, ಆದರೆ ಆತನು ಮತ್ತು ಆತನ ಶಿಕ್ಷಿತರಾದ ಹೋರಾಟಗಾರರು ಸೆರೆಯಲ್ಲಿರುವವರನ್ನು ಬಿಡಿಸಿ ಅವರ ಸ್ವತ್ತುಗಳನ್ನು ಹಿಂದಕ್ಕೆ ಪಡೆದುಕೊಳ್ಳುವಲ್ಲಿ ದೇವರ ಸಾಧನಗಳಾಗಿ ಬಳಸಲ್ಪಟ್ಟಿರುವರೆಂಬ ಕಾರಣದಿಂದಲೇ ಜಯಿಸಿರುತ್ತಾನೆ ಎಂಬುದನ್ನು ಆತನು ಗ್ರಹಿಸಿಕೊಂಡನು. ಆದದರಿಂದ, ರಾಜನು **ಪರಾತ್ಪರನಾದ ದೇವರು** [ಅಬ್ರಹಾಮನ] **ಶತೃಗಳನ್ನು** [ಆತನ] **ಕೈಗೆ ಒಪ್ಪಿಸಿದ್ದು** ಎಂಬುದನ್ನು ದೃಢಪಡಿಸಿದನು.[23] “ಶತೃಗಳು” (צַר, *ತ್ಸಾರ* ಎಂಬುದರಿಂದ ಬಂದದ್ದು) ಎಂಬ ಪದವನ್ನು “ಪೀಡಕರು” ಎಂದು ಅನುವಾದಿಸಬಹುದು ಯಾಕೆಂದರೆ ಅದು ಕೊಳ್ಳೆ ಹೊಡೆಯುವ ಸೈನ್ಯದಿಂದ ಬಂಧಿಯಾಗಿರುವ ಜನರು ಅನುಭವಿಸುತ್ತಿದ್ದ ವೇದನೆ ಮತ್ತು ಭಯವನ್ನು ಬಣ್ಣಿಸುತ್ತದೆ (ಯೆರೆಮೀಯ 6:24).[24]

ಮೂಡಣದ ಅರಸನನ್ನು ಅಬ್ರಹಾಮನ ಕೈಗೆ ಒಪ್ಪಿಸಿ ಕೊಡುವದರಲ್ಲಿ ದೇವರು ಮಾಡಿರುವ ಕಾರ್ಯ ಮತ್ತು ಮೆಲ್ಕೀಚೆದೆಕನು ಆತನನ್ನು ಆಶೀರ್ವದಿಸಿದ್ದನ್ನು ಆಧರಿಸಿ, ಮೂಲಪಿತೃವು ಆ ಬಳಿಕ ಅರಸನಿಗೆ/ಯಾಜಕನಿಗೆ **ಹತ್ತನೆಯ ಒಂದು ಭಾಗವನ್ನು** ಕೊಟ್ಟನು. ದಶಮಾಂಶ ಅಥವಾ ಹತ್ತನೆಯ ಒಂದು ಭಾಗವನ್ನು ಕೊಡುವುದು ಪ್ರಾಚೀನ ಮಧ್ಯಪ್ರಾಚ್ಯದಲ್ಲಿ ಆದಿ ಕಾಲದಿಂದಲೂ ಚಾಲ್ತಿಯಲ್ಲಿರುವ ಪದ್ಧತಿಯಾಗಿರುತ್ತದೆ. ಜನರು ತಮ್ಮ ದೇವಾಲಯಗಳಲ್ಲಿನ ಯಾಜಕರಿಗೆ ಮಾತ್ರವಲ್ಲದೆ ಅರಮನೆಗಳಲ್ಲಿನ ಅವರ ಅರಸರಿಗೆ ಸಹಾಯವನ್ನು ಮಾಡುವದಕ್ಕಾಗಿ ಕಾಣಿಕೆಗಳನ್ನು ಕೊಡುತ್ತಿದ್ದರು.[25] ಮೆಲ್ಕೀಚೆದೆಕನು ಎರಡೂ ವಿಧವಾದ ದಶಮಾಂಶಗಳಿಗೆ ಅರ್ಹನಾಗಿದ್ದನು, ಆದರೆ ಸಾಲೇಮಿನಿಂದ ಬಂದ ವೈಶಿಷ್ಟ್ಯವಾದ ಕಾನಾನ್ಯರ ಯಾಜಕನಾಗಿದ್ದಲ್ಲಿ ಅಬ್ರಹಾಮನು ಆತನಿಗೆ ದಶಮಾಂಶವನ್ನು ಕೊಟ್ಟಿರುವುದು ಅತ್ಯಂಥ ಸಂದೇಹಕರವಾಗಿರುತ್ತಿತ್ತು. ನಿಶ್ಚಯವಾಗಿಯೂ, ಅಬ್ರಹಾಮನು ಆರಾಧಿಸುತ್ತಿದ್ದ ಅದೇ ದೇವರ ಯಾಜಕನು ಈ ಮನುಷ್ಯನಾಗಿದ್ದರಿಂದಲೇ ಆತನು ಪಲಾಯನ ಮಾಡಿದ ಅರಸರಿಂದ ಹಿಂದಿರುಗಿ ಪಡೆದುಕೊಂಡಿದ್ದ ಎಲ್ಲಾ ಸ್ವತ್ತುಗಳಿಂದ ಅವನಿಗೆ ದಶಮಾಂಶವನ್ನು ಕೊಟ್ಟಿದ್ದನು. ಹಾಗೆ ಮಾಡುವ ಮೂಲಕ ದೇವರ ಸೇವೆ ಮಾಡುವವರಿಗೆ ಒಂದು ಆಶೀರ್ವಾದವಾಗಿರಬೇಕು ಎಂಬುದಕ್ಕೆ (ಯಾಜಕಕಾಂಡ 27:30-33; ಅರಣ್ಯಕಾಂಡ 18:21-32) ಅಬ್ರಹಾಮನು ತನ್ನ ಸಂತತಿಯವರಿಗೆ - ಯಾಕೋಬ (28:22) ಮತ್ತು ಇಸ್ರಾಯೇಲ್ಯರಿಗೆ - ಮಾದರಿಯನ್ನು ತೋರಿಸಿದನು.

**ವಚನ 21.** ಈ ಹಂತದಲ್ಲಿ ಕಥಾಹಂದರವು ಪುನಃ **ಸೊದೋಮಿನ ಅರಸನ** ಕಡೆಗೆ ಬದಲಾಗುತ್ತದೆ, ಅಬ್ರಹಾಮನ ಕಡೆಗೆ ಈತನು ಹೊಂದಿದ್ದ ಮನೋಭಾವವು ಮೆಲ್ಕೀಚೆದೆಕನಲ್ಲಿದ್ದ ಮನೋಭಾವಕ್ಕೆ ತೀಕ್ಷ್ಣವಾದ ವಿರುದ್ಧ ಹೋಲಿಕೆಯಲ್ಲಿರುತ್ತದೆ. ಸೊದೋಮಿನ ಅರಸನು ಒಂದು ಅತೃಪ್ತಿಯ ಮನಸ್ಸಿನಾಗಿದ್ದನೆಂದು ತೋರಿಸುವಂತೆ ಮೂಲಪಿತೃವಿಗೆ ಬೇಡಿಕೆಯನ್ನು ಇಡುತ್ತಾನೆ, ಸಾಲೇಮಿನ ರಾಜನಾದರೋ ಅಬ್ರಹಾಮನಿಗೆ ರೊಟ್ಟಿ ಮತ್ತು ದ್ರಾಕ್ಷಾರಸಗಳನ್ನು ತಂದು ಒಂದು ಆಶೀರ್ವಾದ ನೀಡುವ ಮೂಲಕ ಆತನನ್ನು

ಸನ್ಮಾನಿಸಿದನು. ಅಷ್ಟುಮಾತ್ರವಲ್ಲದೆ, ಸೊದೋಮಿನ ಅರಸನು ಏಕಾಏಕಿ ಬೇಡಿಕೆಯನ್ನಿಟ್ಟದ್ದು ಆತನಲ್ಲಿ ಸ್ವಲ್ಪವೂ ಸಭ್ಯತೆ ಮತ್ತು ಕೃತಜ್ಞತಾಭಾವವು ಇಲ್ಲದಿರುವದನ್ನು ತೋರಿಸಿ ಕೊಡುತ್ತದೆ. ಇಬ್ರಿಯ ಭಾಷೆಯಲ್ಲಿ ಕೇವಲ ಆರು ಮಾತುಗಳಲ್ಲಿ ಮುಂದಿಡಲ್ಪಟ್ಟಿದ್ದಾಗಿ, ಅದರರ್ಥವು ಏನೆಂದರೆ, **ಜನರನ್ನು ನನಗೆ ಒಪ್ಪಿಸು; ಆಸ್ತಿಯನ್ನು ನೀನೇ ತಕ್ಕೋ.** ಜಯಶಾಲಿಯಾಗಿದ್ದ ಅಬ್ರಹಾಮನಿಗೆ ಯುದ್ಧದಲ್ಲಿ ದೊರೆತ ಸ್ವತ್ತುಗಳನ್ನು ಯಾರಿಗೆ ಹಂಚಿಕೆ ಮಾಡಬೇಕೆಂದು ನಿರ್ಧರಿಸುವ ಹಕ್ಕು ಹೊಂದಿದ್ದನು. ಆತನು ಜನರನ್ನು ಮತ್ತು ಸ್ವತ್ತುಗಳೆರಡನ್ನೂ ತಾನೇ ಇಟ್ಟುಕೊಂಡು ಬಿಡುವನೋ ಎಂಬ ಭಯವು ಸೊದೋಮಿನ ಅರಸನಿಗೆ ಇತ್ತು.

**ವಚನಗಳು 22, 23.** ಅಬ್ರಹಾಮನು ಮುಜುಗರಕ್ಕೊಳಪಟ್ಟ ಮತ್ತು ಸೋಲಿಸಲ್ಪಟ್ಟಿದ್ದ ಅರಸನಿಗೆ ನೀಡಿದ ಪ್ರತ್ಯುತ್ತರವು ಆತನು ತನ್ನನ್ನು ಶ್ರೀಮಂತಗೊಳಿಸಿಕೊಳ್ಳಲು ಈ ಮಿಲಿಟರಿ ಸಾಹಸಕ್ಕೆ ಕೈ ಹಾಕಿರಲಿಲ್ಲ ಎಂಬುದನ್ನು ತೋರಿಸಿ ಕೊಡುತ್ತದೆ. ಅದಕ್ಕೆ ಸಂಪೂರ್ಣ ತದ್ವಿರುದ್ಧವಾಗಿ, ಆತನು ಈಗಾಗಲೇ ಯುದ್ಧದ ಸೂರೆಗಳೊಳಗೆ, **ಒಂದು ದಾರವನ್ನಾಗಲಿ ಕೆರದ ಬಾರದಂತಹ** ಒಂದು ಚಿಕ್ಕ ವಸ್ತುವನ್ನಾದರೂ ತೆಗೆದುಕೊಳ್ಳುವದಿಲ್ಲ ಎಂಬುದಾಗಿ **ಭೂಮ್ಯಾಕಾಶಗಳನ್ನು ನಿರ್ಮಾಣಮಾಡಿದ ಪರಾತ್ಪರದೇವರಾಗಿರುವ ಯೆಹೋವನ ಕಡೆಗೆ ಕೈಯೆತ್ತಿ ಪ್ರಮಾಣ**[26] ಮಾಡಿದ್ದನು. ಈ ಪ್ರಮಾಣದ ಮೂಲಕವಾಗಿ, ಅಬ್ರಹಾಮನು ತನ್ನನ್ನು ಆಶೀರ್ವದಿಸುವಂತೆ ಭರವಸವನ್ನು ಯೆಹೋವನಲ್ಲಿಯೇ ಇಟ್ಟಿದ್ದಾನೆಂಬುದಕ್ಕೆ ಸಾಕ್ಷಿ ಹೇಳಿದನು. ಆತನ ಮತ್ತು ಆತನ ಜನರು ಯುದ್ಧದಲ್ಲಿ ಅನುಭವಿಸಿದ ಏನೇ ಯಶಸ್ಸನ್ನು ಹೊಂದಿದ್ದರೂ ಅದಕ್ಕಾಗಿ ಆತನು ಯಾವದೇ ಭೂಲೋಕದ ಅರಸನಿಗೆ ಋಣಸ್ಥನಾಗಿರುವದಕ್ಕೆ ಬಯಸಲಿಲ್ಲ. ಸ್ಪಷ್ಟವಾಗಿರುವಂತೆ, ಸೊದೋಮಿನ ಅರಸನ ಗುಣಸ್ವಭಾವದ ಕುರಿತಾಗಿ ಒಂದಿಷ್ಟನ್ನು ಈಗಾಗಲೇ ತಿಳಿದುಕೊಂಡಿದ್ದನು. ಆತನು **ನನ್ನ ಸೊತ್ತಿನಿಂದಲೇ ಐಶ್ವರ್ಯವಂತನಾದನೆಂದು ಹೇಳಿಕೊಳ್ಳುವದಕ್ಕೆ** ಎಂಬುದಾಗಿ ಹೇಳಿಕೊಳ್ಳಲು ಆಸ್ಪದವೇ ಸಿಕ್ಕದ ಹಾಗೆ ಮಾಡುವದಕ್ಕೆ, ಅಬ್ರಹಾಮನು ಸೂರೆ ಮಾಡಿದ ವಸ್ತುಗಳಲ್ಲಿ ಒಂದನ್ನಾದರೂ ಇಟ್ಟುಕೊಳ್ಳಲು ನಿರಾಕರಿಸಿದನು.

**ವಚನ 24.** ಸೂರೆಯಲ್ಲಿ ಏನನ್ನು ತೆಗೆದುಕೊಳ್ಳದಿರುವ ತನ್ನ ತೀರ್ಮಾನವನ್ನು ತನ್ನ ಮಿತ್ರಪಡೆಗಳ ಮೇಲೆ ಹೇರುವದಕ್ಕೆ ಇಷ್ಟಪಡಲಿಲ್ಲ. ಯುದ್ಧದಲ್ಲಿ ಹೋರಾಡಿದ್ದ **ಆಳುಗಳು** ತಮ್ಮ ಬಲವನ್ನು ಪೋಷಿಸಿಕೊಳ್ಳಲು ಈಗಾಗಲೇ **ತಿಂದದ್ದರು**. ಅಲ್ಲದೆ **ಆನೇರ ಎಷ್ಕೋಲ ಮಮ್ರೆಯರಾಗಲಿ**, ತಮ್ಮ ಪ್ರಾಣಗಳನ್ನು ಪಣಕ್ಕಿಟ್ಟ ಹೋರಾಡಿ ಗೆದ್ದ ನಂತರದಲ್ಲಿ ತಮಗೆ ಬರತಕ್ಕ **ಪಾಲು** ತ್ಯಜಿಸಬೇಕೆಂದು ಸಹ ಅಬ್ರಹಾಂನು ಅಪೇಕ್ಷಿಸಲಿಲ್ಲ. ಆದದರಿಂದ, ಸೊದೋಮಿನ ರಾಜನು ಅನುಮತಿಸಲಿ ಅಥವಾ ಅನುಮತಿಸದಿರಲಿ, ಅವರಿಗೆ ಪಾಲು **ಮಾತ್ರ ಇರಲಿ** ಎಂದು ಆತನು ನಿರ್ಧರಿಸಿದನು.

# ಅನ್ವಯಿಸುವಿಕೆ

## ಒಂದು "ಆಶೀರ್ವಾದನಿಧಿ" ಆಗಿರುವ ಅಬ್ರಹಾಮನು (13:5-7; 14:1-24)

12:2ರಲ್ಲಿ ಅಬ್ರಹಾಮನಿಗೆ ದೇವರು ಮಾಡಿದ ವಾಗ್ದಾನದಲ್ಲಿ ಒಂದು ಮಾರ್ಗಸೂಚಿಯು ಸೇರಿತ್ತು: "ಆಶೀರ್ವಾದನಿಧಿಯಾಗಿರು." 13 ಮತ್ತು 14 ಅಧ್ಯಾಯಗಳಲ್ಲಿ, ಆತನು ಆ ಆದೇಶವನ್ನು ನೆರವೇರಿಸುವದಕ್ಕೆ ಆರಂಭಿಸಿದ್ದನು.

*ಅಬ್ರಹಾಮನು ಲೋಟನಿಗೆ ಒಂದು ಆಶೀರ್ವಾದವಾಗಿದ್ದನು.* ಆದಿಕಾಂಡ 12:1–3ರಲ್ಲಿ,

ದೇವರು ಅಬ್ರಹಾಮನನ್ನು ಅನೇಕ ವಿಧಗಳಲ್ಲಿ ಆಶೀರ್ವದಿಸುವೆನೆಂದು ವಾಗ್ದಾನ ಮಾಡಿದನು. ಆ ವಾಕ್ಯದ ಮಧ್ಯದಲ್ಲಿ, ದೇವರು ಮೂಲಪಿತೃವಿಗೆ ಬೇರೆಯವರಿಗೆ "ಆಶೀರ್ವಾದನಿಧಿಯಾಗಿರು" ಎಂದು ಆಜ್ಞಾಪಿಸಿದನು. ಹೇಗೂ, ನಾವು ಅಧ್ಯಾಯ 12ರ ಕಡೆಯ ಭಾಗದಲ್ಲಿ ನೋಡಿದ ಪ್ರಕಾರ, ಒಂದು ಆಶೀರ್ವಾದನಿಧಿ ಆಗಿರುವದರ ಬದಲಾಗಿ, ಅಬ್ರಹಾಮನು ಐಗುಪ್ತದಲ್ಲಿನ ಫರೋಹನ ಮನೆಯವರ ಮೇಲೆ ಶಾಪಗಳನ್ನು (ಉಪದ್ರವಗಳನ್ನು) ಬರಮಾಡಿದನು. ಆತನು ಸಾರಳ ವಿಷಯದಲ್ಲಿ ಸುಳ್ಳಾಡುವದಕ್ಕೆ ನಿರ್ಧರಿಸಿ, ಆಕೆಯನ್ನು ತನ್ನ ಹೆಂಡತಿಯಲ್ಲ ಆದರೆ ತಂಗಿ ಎಂಬುದಾಗಿ ಹೇಳಿದ್ದರ ಫಲಿತವಾಗಿ ಇದು ಸಂಭವಿಸಿತ್ತು (12:13, 17). ಅಬ್ರಹಾಮನು ಆ ಅನುಭವದಿಂದ ಒಂದು ಪಾಠವನ್ನು ಕಲಿತುಕೊಂಡನೆಂದು ಕಾಣಿಸುತ್ತದೆ. ಆತನು ಮತ್ತು ಆತನ ಪರಿವಾರದವರು ಕಾನಾನಿಗೆ ಹಿಂದಿರುಗಿ ಬಂದ ಬಳಿಕ ಆತನ ದನಕಾಯುವವರ ಮತ್ತು ಲೋಟನ ದನಕಾಯುವವರ ನಡುವೆ ವ್ಯಾಜ್ಯವು ಉದ್ಭವವಾದ ವೇಳೆ, ಆತನು ತನ್ನ ತಮ್ಮನ ಮಗನಿಗೆ ಆತನು ಯಾವ ಸ್ಥಳದಲ್ಲಿ ನೆಲೆಸಲು ಬಯಸುವನೋ ಆ ಭಾಗವನ್ನು ದೇಶದಲ್ಲಿ ಆರಿಸಿಕೊಳ್ಳುವಂತೆ ಸದವಕಾಶವನ್ನು ನೀಡಿದನು. ಹಾಗೆ ಮಾಡುವ ಮೂಲಕ, ಅಬ್ರಹಾಮನು ನಿಶ್ಚಯವಾಗಿಯೂ ಆಶೀರ್ವಾದನಿಧಿ ಆಗಿದ್ದನು ಯಾಕೆಂದರೆ, ಲೋಟನ ದೊಡ್ಡಪ್ಪನಾಗಿ, ಮೊದಲಿಗೆ ತಾನು ಆರಿಸಿಕೊಂಡು ಮಿಕ್ಕದ್ದನ್ನು ತಮ್ಮನ ಮಗನನ್ನು ತೊರೆದು ವಿರುದ್ಧ ದಿಕ್ಕಿನಲ್ಲಿ ಸಾಗುವ ಹಕ್ಕನ್ನು ಹೊಂದಿದ್ದನು. ಅಬ್ರಹಾಮನು ಲೋಟನಿಗೆ ಆಶೀರ್ವಾದವುಂಟು ಮಾಡಿರಬಹುದಾದ ಇನ್ನೊಂದು ರೀತಿಯು ಏನೆಂದರೆ ತನಗೆ ಐಗುಪ್ತದಲ್ಲಿ ದೊರೆತ ಐಶ್ವರ್ಯದಲ್ಲಿ ಕೆಲವೊಂದನ್ನು ಆತನೊಂದಿಗೆ ಹಂಚಿಕೊಳ್ಳುವ ಮೂಲಕವೇ ಆಗಿತ್ತು (ನೋಡಿರಿ 13:5, 6).

ಹೊಸ ಒಡಂಬಡಿಕೆಯ ಪ್ರಕಾರವಾಗಿ, ತನ್ನ ಜನರು ಬೇರೆಯವರಿಗೆ ಆಶೀರ್ವಾದವಾಗಿರಬೇಕೆಂದು ದೇವರು ಈಗಲೂ ಬಯಸುತ್ತಾನೆ. ಕ್ರೈಸ್ತರು "ಮೇಲು ಬರುವಂತೆ ಕೇಡು ಮಾಡಲಿ" ಎಂದು ಆತನು ಬಯಸುವದಿಲ್ಲ (ರೋಮಾ 3:8); ಆ ರೀತಿಯ ಕೃತ್ಯಗಳು ಜನರನ್ನು ದೇವರ ಹೆಸರನ್ನು ಮಹಿಮೆ ಪಡಿಸುವದರ ಬದಲಾಗಿ ಅದನ್ನು ದೂಷಣೆ ಮಾಡುವಂತೆ ನಡಿಸುತ್ತವೆ (ರೋಮಾ 2:24; 2 ಪೇತ್ರ 2:2). ಪರ್ವತದ ಮೇಲಿನ ಪ್ರಸಂಗದಲ್ಲಿ, ಯೇಸುವು ತನ್ನ ಶಿಷ್ಯರಿಗೆ (ಇದೇ ರೀತಿಯ ಮಾತನ್ನು ಬಳಸದೆ ಇದ್ದರೂ) ತಮ್ಮ ಸುತ್ತಲಿನವರಿಗೆ ಆಶೀರ್ವಾದಕರವಾಗಿರಬೇಕೆಂದು ಕಲಿಸಿದನು. ಆತನು ಹೀಗೆ ಹೇಳಿದನು, "ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ. ಹೀಗಾದರೆ ಅವರು ನಿಮ್ಮ ಒಳ್ಳೇ ಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು" (ಮತ್ತಾಯ 5:16). ಪೇತ್ರನು ಈ ಸತ್ಯವನ್ನು ಸವಿಸ್ತಾರವಾಗಿ ವಿವರಿಸುತ್ತಾ ಕ್ರೈಸ್ತರು "ಅಪಕಾರಕ್ಕೆ ಅಪಕಾರವನ್ನು ನಿಂದೆಗೆ ನಿಂದೆಯನ್ನು ಮಾಡದೆ ಆಶೀರ್ವದಿಸಿರಿ" ಎಂದು ಹೇಳಿದನು; ಮತ್ತು ದೇವರು ನಮ್ಮನ್ನು "ಇದಕ್ಕಾಗಿ ಕರೆದನಲ್ಲಾ" ಎಂದು ಗಮನಕ್ಕೆ ತರುತ್ತಾನೆ: "ಆಶೀರ್ವಾದವನ್ನು ಬಾಧ್ಯವಾಗಿ ಹೊಂದಲು" (1 ಪೇತ್ರ 3:9). ಆತನು "ಆಶೀರ್ವಾದನಿಧಿಯಾಗಿರುವ" ಭಾವನೆಯು ಕೇವಲ "ದೇವರು ನಿನ್ನನ್ನು ಆಶೀರ್ವದಿಸಲಿ" ಎಂದು ಹೇಳುವದರ ಮೇಲೆ ಆಧಾರವಾಗಿಲ್ಲ ಎಂಬುದನ್ನು ಸ್ಪಷ್ಟಗೊಳಿಸಿದನು; ಅದು ಕ್ರಿಯೆಯನ್ನು ಸಹ ಸೂಚಿಸುತ್ತದೆ. ಅಪೊಸ್ತಲನು ತನ್ನ ವಾಚಕರಿಗೆ "ಕೆಟ್ಟದ್ದನ್ನು ಬಿಟ್ಟು ಒಳ್ಳೇದನ್ನು ಮಾಡಲಿ" ಮತ್ತು "ಸಮಾಧಾನವನ್ನು ಹಾರೈಸಿ ಅದಕ್ಕೋಸ್ಕರ ಪ್ರಯತ್ನಪಡಲಿ" ಎಂದು ಬುದ್ಧಿವಾದ ಹೇಳಿದನು (1 ಪೇತ್ರ 3:11).

*ಅಬ್ರಹಾಮನು ಅಮೋರಿಯ ಸಹೋದರರಿಗೆ ಆಶೀರ್ವಾದನಿಧಿಯಾಗಿದ್ದನು.* ಮೂಡಣದ ನಾಲ್ಕು ಅರಸರ ಸೈನ್ಯಗಳು ತಮ್ಮ ವಿರುದ್ಧವಾಗಿ ಬಂಡಾಯವೆದ್ದಿದ್ದ ಐದು ಮಂದಿ ಅರಸರನ್ನು

ಏಕಾಂಗಿಗೊಳಿಸುವದಕ್ಕಾಗಿ ಉತ್ತರ, ಪೂರ್ವ, ದಕ್ಷಿಣ, ಮತ್ತು ಪೂರ್ವದಲ್ಲಿನ ಪಟ್ಟಣಗಳ ಮೇಲೆ ಆಕ್ರಮಣ ಮಾಡಿ ಧ್ವಂಸಗೊಳಿಸಿದ ವೇಳೆ, ಇದು ಅಬ್ರಹಾಮ ಮತ್ತು ಆತನ ಸಮೀಪದಲ್ಲಿ ಜೀವಿಸುತ್ತಿದ್ದ ಅಮೋರಿಯರನ್ನು ಒಂದು ದೊಡ್ಡ ಅಪಾಯಕ್ಕೆ ಸಿಲುಕಿಸಿತ್ತು. ನಾಲ್ವರು ಅರಸರು ಐದು ಅರಸರ ವಿರುದ್ಧ ಯುದ್ಧವನ್ನು ಆರಂಭಿಸುವ ಮುನ್ನವೇ, ಅಬ್ರಹಾಮನು ಮೂವರು ಅಮೋರಿಯ ಸಹೋದರರ – ಆನೇರ, ಎಷ್ಕೋಲ, ಮತ್ತು ಮಮ್ರೆ – ಸಂಗರೊಂದಿಗೆ ಒಂದು ರಕ್ಷಣಾತ್ಮಕ ಮೈತ್ರಿಯನ್ನು (ಒಡಂಬಡಿಕೆ) ಮಾಡಿಕೊಂಡಿದ್ದನು (14:13).

ಅಮೋರಿಯ ಸಮುದಾಯವು ಎಷ್ಟು ದೊಡ್ಡದಿತ್ತು ಅಥವಾ ಅವರೊಳಗೆ ಎಷ್ಟು ಮಂದಿ ಯುದ್ಧವೀರರಿದ್ದರು ಎಂಬುದು ನಮಗೆ ತಿಳಿಯದು; ಆದರೆ ಅಬ್ರಹಾಮನಿಗಿದ್ದ 318 ಮಂದಿ ಹೋರಾಡುವ ಜನರ ತಂಡವು ಒಂದು ತಕ್ಕ ಮಟ್ಟಿಗಿರುವ ಗಾತ್ರದ ಖಾಸಗಿ ಸೈನ್ಯವೇ ಆಗಿತ್ತು, ಮತ್ತು ದಾಳಿಯಿಟ್ಟಿರುವ ಪಡೆಗಳಿಂದ ಅವರಿಗೆ ಏನಾದರೂ ಅಪಾಯ ಎದುರಾದಲ್ಲಿ ಇವರು ತಮ್ಮ ಪಕ್ಷದಲ್ಲಿರಬೇಕೆಂದು ಅಮೋರಿಯರು ಬಯಸಿದ್ದರು. ಅದರ ಜೊತೆಗೆ, ಅಬ್ರಹಾಮನು ಸತ್ಯ ದೇವರು ತನ್ನನ್ನು ಕರೆದ ಕುರಿತಾದ ಕಥೆಯನ್ನು ಅವರೊಂದಿಗೆ ಹಂಚಿಕೊಂಡಿರಬಹುದಾಗಿದೆ. ಬಹುಶಃ ಅವರು ಯೆಹೋವನು ಈತನನ್ನು ಇಷ್ಟೊಂದು ದೊಡ್ಡ ಐಶ್ವರ್ಯವನ್ನು ನೀಡಿ ಆಶೀರ್ವದಿಸಿದ್ದಾನೆಂದು ಅರ್ಥಮಾಡಿಕೊಂಡಿರಬಹುದು.

ನಾಲ್ಕು ಮಂದಿ ಮೂಡಣದ ಅರಸರ ಮೇಲೆ ಜಯವನ್ನು ಗಳಿಸಿದ ಬಳಿಕ, ಮೂಲಪಿತೃವು ಯುದ್ಧದಲ್ಲಿ ದೊರೆತ ಜಯಕ್ಕಾಗಲಿ ಅಥವಾ ಜನರು ಹಾಗೂ ಸ್ವತ್ತುಗಳು ಹಿಂದಿರುಗಿ ಸಿಕ್ಕಿರುವದಕ್ಕೆ ಶ್ರೇಯಸ್ಸು ಪಡೆಯಲು ನಾನು ಅರ್ಹನಲ್ಲ ಎಂಬುದನ್ನು ಈ ಅನ್ಯಜನರಿಗೆ ಸಾಕ್ಷಿಯಾಗಿ ನುಡಿದನು. ಅಬ್ರಹಾಮನು "ಭೂಮ್ಯಾಕಾಶಗಳನ್ನು [ಅಥವಾ ಒಡೆಯನು] ನಿರ್ಮಾಣಮಾಡಿದ ಪರಾತ್ಪರದೇವರಾಗಿರುವ ಯೆಹೋವನನ್ನು" ಸ್ತುತಿಸಿದಾಗ (14:22), ಆತನು "ಜನಾಂಗಗಳಿಗೆ" (גּוֹיִם, *ಗೊಯಿಮ್*, ಅನ್ಯಜನರು; ಯೆಶಾಯ 49:6) ಒಂದು "ಬೆಳಕು" ಆಗಿ ನಡೆದನು.

ಅಬ್ರಹಾಮನು ಅನ್ಯಜನರಿಗೆ ಆಶೀರ್ವಾದನಿಧಿಯಾಗಿರುವ ಪ್ರಕ್ರಿಯೆಯನ್ನು ಆರಂಭಿಸುವವನಾಗಿದ್ದನು; ಮತ್ತು ಆತನ ಸಂತತಿಯವರಾದ ಇಸ್ರಾಯೇಲ್ಯರು ಅದನ್ನು ಮುಂದುವರೆಸಿಕೊಂಡು ಹೋಗಬೇಕಾಗಿತ್ತು. ಬಹಳಷ್ಟು ಕಾಲದ ಬಳಿಕ, ಸೀನಾಯಿ ಪರ್ವತದಲ್ಲಿ ದೇವರು ತನ್ನ ಜನರಿಗೆ "ಯಾಜಕ ರಾಜ್ಯವೂ ಪರಿಶುದ್ಧ ಜನವೂ ಆಗಿರಬೇಕು" ಎಂದು ಹೇಳಿದನು (ವಿಮೋಚನಕಾಂಡ 19:6). ಇಸ್ರಾಯೇಲ್ಯರಿಗೆ ದೊರಕುವ ರಕ್ಷಣೆಯು ತನ್ನಲ್ಲೇ ಅಂತ್ಯಗೊಳ್ಳುವಂಥದ್ದು ಆಗಿರಲಿಲ್ಲ. ಯಾಜಕದ್ಯೋಗದ ರಾಜ್ಯವಾಗಿ, ದೇವರಾದುಕೊಂಡ ಜನಾಂಗವು ಆಶೀರ್ವಾದಗಳ ಕಾಲುವೆಯಾಗಿದ್ದು, ದೇವರು ಯಾರು ಮತ್ತು ಎಲ್ಲಾ ಜನರನ್ನು ರಕ್ಷಿಸಿ ಆಶೀರ್ವದಿಸುವದಕ್ಕೋಸ್ಕರ ಆತನು ಏನು ಮಾಡುವನು ಎಂಬ ಸತ್ಯಕ್ಕೆ ಮಧ್ಯಸ್ಥರಾಗಬೇಕೆಂಬುದಕ್ಕಾಗಿ ರಕ್ಷಿಸಲ್ಪಟ್ಟಿತು. ಅವರು ಅನ್ಯಜನರನ್ನು ಅವರ ಸುಳ್ಳು ದೇವರುಗಳನ್ನು ತ್ಯಜಿಸಿ ಬಿಟ್ಟು ಯೆಹೋವನನ್ನು ಸೇವಿಸುವಂತೆ ನಡಿಸಬೇಕಾಗಿತ್ತು.

ಕೆಲವು ಅನ್ಯಜನರು ಸಂದೇಶವನ್ನು ಗ್ರಹಿಸಿಕೊಂಡು ಸತ್ಯ ದೇವರ ಕಡೆಗೆ ತಿರುಗಿಕೊಂಡರು. ಮಿದ್ಯಾನ್ಯರ ಒಬ್ಬ ಆಚಾರ್ಯನಾಗಿದ್ದ ಇತ್ರೋ (ವಿಮೋಚನಕಾಂಡ 18:1–12), ಮತ್ತು ಜಾರಸ್ತ್ರೀಯಾಗಿದ್ದ ರಾಹಾಬಳು (ಯೆಹೋಶುವ 2:9–14; 6:22–25) ಇವರಿಬ್ಬರು ಯೆಹೋವನಲ್ಲಿ ತಮ್ಮ ನಂಬಿಕೆಯನ್ನು ಅರಿಕೆ ಮಾಡಿದರು. ಮೋವಾಬ್ಯಳಾದ ರೂತಳು ಯೆಹೋವನಲ್ಲಿ ನಂಬಿಕೆಯನ್ನು ವ್ಯಕ್ತಪಡಿಸಿದಳು ಮತ್ತು ಆತನು ಇಂದಿನಿಂದ ನನ್ನ ದೇವರಾಗಿರುವನು ಎಂದು ಹೇಳಿದಳು (ರೂತಳು 1:16, 17). ದಾವೀದನ ಯುದ್ಧವೀರರಲ್ಲಿ

ಕೆಲವರು ಅನ್ಯಜನರಾಗಿದ್ದರು, ಅವರೊಳಗೆ ಹಿತ್ತೀಯನಾದ ಊರೀಯನು ಸೇರಿದ್ದನು (2 ಸಮುವೇಲ 23:36-39; 1 ಪೂರ್ವಕಾಲವೃತ್ತಾಂತ 11:39-46). ಅಬ್ಷಾಲೋಮನಿಗೆ ಸಿಂಹಾಸನ ಮತ್ತು ರಾಜ್ಯಗಳು ಸಿಕ್ಕದೆ ಹೋದವೆಂದು ತೋರಿದ ವೇಳೆ, ಗಿತ್ತೀಯನಾದ ಇತ್ತೈ ಎಂಬವನು ದಾವೀದ ಈಗಲೂ ದೇವರ ಮನುಷ್ಯನಾಗಿದ್ದನೆಂದು ನಂಬಿದನು ಮತ್ತು ಆತನಲ್ಲಿ ಹಾಗೂ ಯೆಹೋವನಲ್ಲಿ ತನ್ನ ನಂಬಿಕೆಯನ್ನು ಅರಿಕೆ ಮಾಡಿದನು (2 ಸಮುವೇಲ 15:21). ದಾವೀದನು ಈ ಫಿಲಿಷ್ಟಿಯದ ಸೇನಾಧಿಕಾರಿಯನ್ನು ತನ್ನ ಸೇನೆಯಲ್ಲಿ ಮೂರರೊಳಗೆ ಒಂದು ಭಾಗದ ಮೇಲೆ ಅಧಿಕಾರಿಯನ್ನಾಗಿ ನೇಮಿಸಿದನು, ಮತ್ತು ಈತನು ಹಾಗೂ ಈತನ ಸೈನಿಕರು ದಾವೀದನು ರಾಜ್ಯವು ಅಬ್ಷಾಲೋಮನ ಬಂಡಾಯಗಾರರ ಕೈಗೆ ಬೀಳದಂತೆ ತಡೆಯುವಲ್ಲಿ ಸಹಾಯ ಮಾಡಿದರು (2 ಸಮುವೇಲ 18:1-5). ಅನಂತರದಲ್ಲಿ ಯೆಹೋವನು ದಾವೀದನ ಕುರಿತು ಮಾತಾಡಿ "ಜನಾಂಗಗಳಿಗೆ [ಅನ್ಯಜನರಿಗೆ[27]] ಸಾಕ್ಷಿಯನ್ನಾಗಿಯೂ [ಅನ್ಯಜನರಿಗೆ] ನಾಯಕನನ್ನಾಗಿಯೂ ಅಧಿಪತಿಯನ್ನಾಗಿಯೂ ನೇಮಿಸಿದೆನು" ಎಂದು ಹೇಳಿದನು (ಯೆಶಾಯ 55:4).

*ಅಬ್ರಹಾಮನು ಸೊದೋಮಿನ ದುಷ್ಟರಾದ ಜನರಿಗೆ ಮತ್ತು ಅವರ ಅರಸನಿಗೆ ಒಂದು ಆಶೀರ್ವಾದವಾಗಿದ್ದನು.* ಮೂಡಣದ ಸೈನ್ಯಗಳು ಲೋಟನನ್ನು, ಜೊತೆಯಲ್ಲಿ ಸೊದೋಮ್ ಹಾಗೂ ಇತರ ಪಟ್ಟಣಗಳ ಜನರನ್ನೂ ಅವರ ಸ್ವತ್ತುಗಳನ್ನು ಅಪಹರಿಸಿದ್ದಾರೆಂಬ ಸುದ್ದಿಯನ್ನು ಕೇಳಿದಾಗ, ಮೂಲಪಿತೃವು ತಕ್ಷಣವೇ ಕಾರ್ಯಪ್ರವೃತ್ತನಾದನು. ಆತನು ಜೊತೆಯಲ್ಲಿ ಹೋರಾಟಗಾರರ ತನ್ನ ಚಿಕ್ಕ ಪಡೆ ಹಾಗೂ ಮೋರಿಯದ ಮೂವರು ಸಹೋದರರ ಸೈನ್ಯಗಳನ್ನು ಕರೆದುಕೊಂಡು ಅವರನ್ನು ಬೆನ್ನತ್ತಿದ್ದನು. ಲೋಟನಿಗೆ ರಕ್ಷಿಸುವಿಕೆಯ ಅಗತ್ಯವಿದ್ದ ಕಾರಣ, ಆತನ ದೊಡ್ಡಪ್ಪನು ಆತನಿಗೋಸ್ಕರ ತನ್ನ ಪ್ರಾಣವನ್ನು ಗಂಡಾಂತರಕ್ಕೆ ಗುರಿಪಡಿಸಿಕೊಳ್ಳಲು ಸಂಕೋಚ ಪಡಲಿಲ್ಲ. ಸೊದೋಮಿನ ಜನರು ಎಷ್ಟೊಂದು ಕೆಟ್ಟವರಾಗಿದ್ದರೆಂದರೆ ದೇವರು ಅನಂತರದಲ್ಲಿ ಅವರನ್ನು, ಜೊತೆಗೆ ಬಯಲುಗಳಲ್ಲಿನ ಬೇರೆ ಪಟ್ಟಣಗಳ ಜನರ ಸಮೇತವಾಗಿ ನಾಶಗೊಳಿಸಬೇಕಾಗಿ ಬರುವಂಥ, ಈ ಜನರ ವಿಷಯವೇನು (19:24, 25)? ಲೋಟನಾಗಲಿ ಮತ್ತು ಸೊದೋಮಿನ ಜನರು ಅವರ ಅಪಹರಣಕಾರರ ಕೈಗಳಿಂದ ರಕ್ಷಿಸಲ್ಪಡಲು ಯೋಗ್ಯರೋ ಎಂಬುದರ ಮೇಲೆ ತನ್ನ ನಿರ್ಧಾರವನ್ನು ಆಧಾರವಾಗಿಸಲಿಲ್ಲ, ಆದರೆ ಅವರು ಅಸಹಾಯಕರು ಹಾಗೂ ಅವರ ಪರವಾಗಿ ಯಾರಾದರೂ ಮಧ್ಯಪ್ರವೇಶಿಸಬೇಕಾದ ಅಗತ್ಯತೆಯಲ್ಲಿದ್ದರು ಎಂಬುದರ ಮೇಲೆಯೇ ತನ್ನ ನಿರ್ಧಾರವನ್ನು ಮಾಡಿದ್ದನು.

ದೇವರು ತನ್ನ ಜನರು ಅವರ ನೆರೆಯವರ ವಿಷಯದಲ್ಲಿ ಹೇಗೆ ಪ್ರತಿಕ್ರಿಯಿಸಬೇಕೆಂದು ಬಯಸುತ್ತಾನೆಂಬುದಕ್ಕೆ ಅಬ್ರಹಾಮನ ಕೃತ್ಯಗಳು ಒಂದು ಮಾದರಿಯಾಗುತ್ತವೆ. ದೇವರು ಇಸ್ರಾಯೇಲ್ಯರಿಗೆ "ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸು" ಎಂದು ಆಜ್ಞಾಪಿಸಿದಾಗ, ಅದಕ್ಕೆ ಮುಂಚಿತವಾಗಿ ಆತನು "ನಿಮ್ಮ ಸ್ವಜನರಲ್ಲಿ ಯಾರಿಗಾದರೂ ಕೇಡಿಗೆ ಕೇಡನ್ನು ಮಾಡದೆ ಮನಸ್ಸಿನಲ್ಲಿ ಮತ್ಸರವನ್ನು ಇಟ್ಟುಕೊಳ್ಳದೆ" ಇರಬೇಕೆಂದು ಹೇಳಿದನು (ಯಾಜಕಕಾಂಡ 19:18). ತನ್ನ ಜನರು ಆಜ್ಞೆಯನ್ನು ತಾರ್ಕಿಕಗೊಳಿಸಿ ತಮ್ಮೊಂದಿಗೆ ತಕ್ಕದಾಗಿ ನಡೆದುಕೊಳ್ಳುವ ಇಬ್ರಿಯ ನೆರೆಯವರಿಗಾಗಿ ಮಾತ್ರವೇ ಪ್ರೀತಿಯನ್ನು ಮೀಸಲಿಟ್ಟುಕೊಳ್ಳುವ ಶೋಧನೆಗೊಳಗಾಗುವರು ಎಂದು ದೇವರಿಗೆ ಗೊತ್ತಿತ್ತು. ಹೇಗೂ, ಕೇಡಿಗೆ ಕೇಡನ್ನು ಮಾಡದೆ ಮತ್ಸರವಿಟ್ಟುಕೊಳ್ಳಬಾರದೆಂಬ ನಿಷೇಧಾಜ್ಞೆಯು ಸರಿಯಾಗಿ ತದ್ವಿರುದ್ಧವಾದದ್ದನ್ನೇ ಸೂಚಿಸುತ್ತದೆ. ಅರ್ಹರಲ್ಲದ ನೆರೆಯವರನ್ನು ಸಹ ಪ್ರೀತಿಸತಕ್ಕದ್ದು ಎಂಬುದು

ಅದರರ್ಥವಾಗಿದೆ.

ಇದೇ ಯೋಚನೆಯು ಯೇಸುವಿನ ಬೋಧನೆಯಲ್ಲಿ ಸ್ಪಷ್ಟವಾಗಿ ಕಾಣಿಸುತ್ತದೆ, ಆತನು ಎರಡು ಅತಿ ಶ್ರೇಷ್ಠ ಆಜ್ಞೆಗಳಾವವೆಂದು ತಿಳಿಸುತ್ತಾನೆ: "ನಿನ್ನ ದೇವರಾಗಿರುವ ಕರ್ತನನ್ನು ... ಪ್ರೀತಿಸಬೇಕು. ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು" (ಲೂಕ 10:27). ಆತನು ಯಾವ ಯುವ ವಕೀಲನ ಸಂಗಡ ಮಾತಾಡುತ್ತಿದ್ದನೋ ಆತನು ತನ್ನನ್ನು ಸಮರ್ಥಿಸಿಕೊಳ್ಳುತ್ತಾ "ನನ್ನ ನೆರೆಯವನು ಯಾರು?" ಎಂದು ಕೇಳಿದನು (ಲೂಕ 19:29). ಯೇಸುವು ಈ ಪ್ರಶ್ನೆಗೆ ಉತ್ತರಿಸುತ್ತಾ ಕಳ್ಳರಿಂದ ದೋಚಿಕೊಳ್ಳಲ್ಪಟ್ಟು ಘೋರವಾಗಿ ಹೊಡೆಯಲ್ಪಟ್ಟು ಸಾಯುವದಕ್ಕೆ ರಸ್ತೆಯ ಬದಿಯಲ್ಲಿ ಬಿಟ್ಟು ಹೋದವನೊಬ್ಬನಿಗೆ ಸಹಾಯವನ್ನು ಮಾಡಿದ ಒಳ್ಳೇ ಸಮಾರ್ಯದವನ ಕಥೆಯನ್ನು ಹೇಳಿದನು. ಕಥಾನಿರೂಪಣೆಯ ಅಂತ್ಯದಲ್ಲಿ, ಆತನು ಪ್ರಶ್ನೆಯನ್ನು ಹಿಂದಿರುಗಿಸಿ ಹೀಗೆ ಕೇಳಿದನು, "ಈ ಮೂವರಲ್ಲಿ [ಯಾಜಕ, ಲೇವಿ, ಅಥವಾ ಸಮಾರ್ಯದವನು] ಯಾವನು ಕಳ್ಳರ ಕೈಗೆ ಸಿಕ್ಕಿದವನಿಗೆ ನೆರೆಯವನಾದನೆಂದು ನಿನಗೆ ತೋರುತ್ತದೆ ಹೇಳು" (ಲೂಕ 10:36). ಪ್ರಶ್ನೆಯು "ನನ್ನ ನೆರೆಯವನು ಯಾರು?" ಎಂಬುದಲ್ಲ ಆದರೆ "ನಾನು ಯಾರಿಗೆ ನೆರೆಯವನಾಗಿರಲಿ?" ಎಂಬುದೆ (ನೋಡಿರಿ ಲೂಕ 10:37). ದೇವರು ತನ್ನ ಜನರಿಂದ ಅವರು ಕಷ್ಟದಲ್ಲಿರುವವರಿಗೆ ನೆರೆಯರಂತಿರಬೇಕು ಮತ್ತು ಸಹಾಯಕರಾಗಿರಬೇಕೆಂದು ಬಯಸುತ್ತಾನೆ - ಅವರು ಯಾವ ಜನಾಂಗೀಯ ಹಿನ್ನಲೆಯವರಾಗಿರಲಿ, ಸಾಮಾಜಿಕಆರ್ಥಿಕ ಸ್ಥಾನದಲ್ಲಿರಲಿ, ಅಥವಾ ನೈತಿಕ ಹಾಗೂ ತಪ್ಪುಸರಿ ಎಂಬ ವಿಷಯಗಳನ್ನು ಪರಿಗಣನೆಗೆ ತೆಗೆದುಕೊಳ್ಳದೆ ಹಾಗೆ ಮಾಡತಕ್ಕದ್ದು. ಅನಂತರದಲ್ಲಿ ಪೌಲನು ಇದೇ ಯೋಚನೆಯನ್ನು ಈ ಮಾತುಗಳಲ್ಲಿ ವ್ಯಕ್ತಪಡಿಸಿದನು: "ಆದದರಿಂದ ಸಮಯವಿರಲಾಗಿ ಎಲ್ಲರಿಗೆ ಒಳ್ಳೇದನ್ನು ಮಾಡೋಣ; ಮುಖ್ಯವಾಗಿ ಒಂದೇ ಮನೆಯವರಂತಿರುವ ಕ್ರಿಸ್ತನಂಬಿಕೆಯುಳ್ಳವರಿಗೆ ಮಾಡೋಣ" (ಗಲಾತ್ಯ 6:10). ಯೇಸುವು ತೋರಿಸಿ ಕೊಡುವದಕ್ಕೆ ಹೆಚ್ಚುಕಡಿಮೆ ಎರಡು ಸಾವಿರ ವರ್ಷಗಳ ಹಿಂದೆಯೇ ಅಬ್ರಹಾಮನು ತನ್ನ ನೆರೆಯವರ ಕಡೆಗೆ ಈ ವಿಧವಾದ ಪ್ರೀತಿಯನ್ನು ಅಭ್ಯಾಸ ಮಾಡಿದನು.

*ಅಬ್ರಹಾಮನು ಮೆಲ್ಕೀಚೆದೆಕನಿಗೆ ಒಂದು ಆಶೀರ್ವಾದವಾಗಿದ್ದನು.* ಮೆಲ್ಕೀಚೆದೆಕನು ಅಬ್ರಹಾಮನ ಕುರಿತಾಗಿ, ಒಬ್ಬ ಶ್ರೀಮಂತನಾದ ಪರದೇಶಸ್ಥನು ಮೂಡಣದ ರಾಜರ ಮೇಲೆ ಆಶ್ಚರ್ಯಕರವಾದ ಜಯವನ್ನು ಗಳಿಸಿದ್ದಾನೆ ಎಂಬ ಸುದ್ದಿಯನ್ನು ಹೇಗೆ ಕೇಳಿಸಿಕೊಂಡನು ಎಂಬುದನ್ನು ವಾಕ್ಯವು ಬಯಲುಗೊಳಿಸುವದಿಲ್ಲ. ದಾಳಿ ಮಾಡಿರುವವರು ವಿಶೇಷವಾಗಿ ಕಾನಾನಿನ ಅಕ್ಕಪಕ್ಕವಿರುವ ಪಟ್ಟಣಗಳಲ್ಲಿ ಮಾಡಿರುವ ವಿಧ್ವಂಸಕತೆಯನ್ನು ಮಾಡಿದ ಬಳಿಕ, ಸುದ್ದಿಯು ಬಹುಶಃ ಬಹಳ ವೇಗವಾಗಿ ಹರಡಿಕೊಂಡಿರಬಹುದಾಗಿದೆ. ಅಬ್ರಹಾಮನು ಮೂಡಣದ ಸೈನ್ಯಗಳನ್ನು ಸೋಲಿಸಿದ್ದು ಮಾತ್ರವೇ ಆಗಿರಲಿಲ್ಲ, ಆದರೆ ಆತನು ಸೊದೋಮಿನ ಜನರನ್ನು ಹಾಗೂ ಅವರ ಸ್ವತ್ತುಗಳನ್ನು ಸಹ ಬಿಡಿಸಿ ಕಾಪಾಡಿದ್ದನು. ಮೆಲ್ಕೀಚೆದೆಕನು ಈ ಮನುಷ್ಯನನ್ನು ಭೇಟಿಯಾಗಬೇಕೆಂದು ಮತ್ತು ಆತನಿಗೆ ರೊಟ್ಟಿ ಹಾಗೂ ದ್ರಾಕ್ಷಾರಸಗಳನ್ನು ನೀಡಿ ಸನ್ಮಾನಿಸಬೇಕೆಂದು ಬಯಸಿದ್ದನು; ಅಲ್ಲದೆ ಈತನು ಆತನನ್ನು ಪರಾತ್ಪರನಾದ ದೇವರ ಹೆಸರಿನಲ್ಲಿ ಆಶೀರ್ವದಿಸಬೇಕೆಂದು ಸಹ ಬಯಸಿದನು, ಆ ದೇವರ ವೈಯಕ್ತಿಕ ಹೆಸರು "ಯೆಹೋವ" ಎಂಬುದೆ. ಮೂಲಪಿತೃವು ಮೆಲ್ಕೀಚೆದೆಕನಿಗೆ ತನ್ನ ಎಲ್ಲಾ ವಸ್ತುಗಳಲ್ಲಿ ದಶಮಾಂಶವನ್ನು ಕೊಟ್ಟಾಗ, ಈ ಪರದೇಶಸ್ಥನು ಸತ್ಯದೇವರ ಕಡೆಗೆ ನಿಜವಾಗಿಯೂ ಸಮರ್ಪಿತನಾಗಿದ್ದಾನೆ ಮತ್ತು ಕಾನಾನ್ ದೇಶದಲ್ಲಿ ಯೆಹೋವನ ಪ್ರತಿನಿಧಿಗೆ ಉದಾರವಾಗಿ ಕೊಡುವ ಮೂಲಕ ಅದನ್ನು ತೋರ್ಪಡಿಸುವದಕ್ಕೆ ಮನಸ್ಸುಳ್ಳವನಾಗಿದ್ದಾನೆಂದು ತಿಳಿದಾಗ

ಯಾಜಕನು ಅವನನ್ನು ಆಶೀರ್ವದಿಸಿದನು ಎಂಬುದರಲ್ಲಿ ಸಂಶಯವೇ ಇಲ್ಲ. ಮೆಲ್ಕೀಚೆದೆಕನಿಗೆ ದಾರಾಳವಾಗಿ ಕಾಣಿಕೆಯನ್ನು ಕೊಡುವ ಮೂಲಕ, ಅಬ್ರಹಾಮನು ಅನಂತರದಲ್ಲಿ ಯೇಸುವು ಪ್ರಕಟಿಸಿದ ಸತ್ಯವನ್ನು ಅನುಭವ ಮಾಡಿದನು: "ತೆಗೆದುಕೊಳ್ಳುವದಕ್ಕಿಂತ ಕೊಡುವದೇ ಹೆಚ್ಚಿನ ಭಾಗ್ಯ" (ಅಪೊಸ್ತಲರ ಕೃತ್ಯಗಳು 20:35).

ಆದಿಕಾಂಡ 14:20ನೇ ವಚನವು ಬೈಬಲಿನಲ್ಲಿ ದಶಮಾಂಶದ ಕುರಿತಾದ ಪ್ರಥಮ ಉಲ್ಲೇಖವಾಗಿದೆ, ಆದರೆ ಅದೊಂದು ಬಹಳ ಪ್ರಾಚೀನ ರೂಢಿಯಾಗಿರುತ್ತದೆ. ದೇವರ ಜನರು ಕೃತಜ್ಞತೆಯನ್ನು ವ್ಯಕ್ತಪಡಿಸುವಿಕೆ ಮತ್ತು ಆತನು ಸೃಷ್ಟಿಕರ್ತನಾಗಿದ್ದ ಸಮಸ್ತಕ್ಕೂ ಒಡೆಯನು ಎಂಬುದನ್ನು ಒಪ್ಪಿಕೊಳ್ಳುವಿಕೆಯಾಗಿ ಜನರು ತನ್ನ ಸ್ವತ್ತುಗಳಲ್ಲಿ ಹತ್ತನೆಯ ಒಂದು ಭಾಗವನ್ನು ಯೆಹೋವನಿಗೆ ಅರ್ಪಿಸುತ್ತಿದ್ದರು. ನಮಗಿರುವದೆಲ್ಲವೂ ಆತನ ಕೈಗಳಿಂದ ನಮ್ಮ ಕೈಗಳಿಗೆ ಕೊಡಲ್ಪಟ್ಟಿರುವ ವರದಾನವಾಗಿರುತ್ತದೆ. ದೇವಾಲಯವನ್ನು ಕಟ್ಟುವದಕ್ಕೋಸ್ಕರ ಜನರು ಹೊಂದಿರುವ ಆಸಕ್ತಿ ಉದಾರವಾಗಿ ಕೊಡುವದನ್ನು ಕಂಡ ಬಳಿಕ ದಾವೀದನು ಉದಾರವಾಗಿ ಕೊಟ್ಟ ವೇಳೆ, ಹೀಗೆ ಪ್ರಾರ್ಥನೆ ಮಾಡಿದನು: "ನಾವು ಈ ಪ್ರಕಾರ ಸ್ವೇಚ್ಛೆಯಿಂದ ಕಾಣಿಕೆಗಳನ್ನು ಸಮರ್ಪಿಸಲು ಶಕ್ತಿಹೊಂದಿದ್ದಕ್ಕೆ ನಾನಾಗಲಿ ನನ್ನ ಪ್ರಜೆಗಳಾಗಲಿ ಎಷ್ಟರವರು? ಸಮಸ್ತವು ನಿನ್ನಿಂದಲೇ; ನೀನು ಕೊಟ್ಟದ್ದನ್ನೇ ನಿನಗೆ ಕೊಟ್ಟೆವು" (1 ಪೂರ್ವಕಾಲವೃತ್ತಾಂತ 29:14).

ಪೌಲನು ಯೆರೂಸಲೇಮಿನಲ್ಲಿರುವ ಬಡ ದೇವಜನರ ಸಹಾಯಕ್ಕೋಸ್ಕರ ಯೂರೋಪ ಮತ್ತು ಆಸ್ಯಸೀಮೆಯಲ್ಲಿರುವ ಅನ್ಯಜನಾಂಗದ ಸಭೆಗಳಿಂದ ಹಣ ಸಂಗ್ರಹಿಸುತ್ತಿರುವ ವೇಳೆ ಮನಃಪೂರ್ವಕವಾಗಿಯೂ ಉದಾರವಾಗಿಯೂ ಕೊಡಬೇಕೆಂದು ಕೊರಿಂಥದಲ್ಲಿರುವ ಸಹೋದರರನ್ನು ಪ್ರೋತ್ಸಾಹಿಸುತ್ತಾ ದಾವೀದನ ಇದೇ ಮಾತುಗಳನ್ನು ಪ್ರತಿಧ್ವನಿಸಿದನು (1 ಕೊರಿಂಥ 16:1-4). ಕ್ರೈಸ್ತೀಯ ಕೊಡುವಿಕೆಗೆ ತಳಹದಿಯು ದಾವೀದನ ಕಾಲದಲ್ಲಿ ಇದ್ದಂಥ ಅದೇ ಸಂಗತಿಯೇ ಆಗಿರಬೇಕೆಂದು ಆತನು ಒತ್ತಿ ಹೇಳಿದನು: "ನಮ್ಮ ಕರ್ತನಾದ ಯೇಸು ಕ್ರಿಸ್ತನ ಕೃಪೆಯು ನಿಮಗೆ ಗೊತ್ತಾಗಿದೆಯಲ್ಲಾ; ಆತನು ಐಶ್ವರ್ಯವಂತನಾಗಿದ್ದು ತಾನು ಬಡತನದಲ್ಲಿ ಸೇರುವದರಿಂದ ನೀವು ಐಶ್ವರ್ಯವಂತರಾಗಬೇಕೆಂದು ನಿಮಗೋಸ್ಕರ ಬಡವನಾದನು" (2 ಕೊರಿಂಥ 8:9; ನೋಡಿರಿ 9:7-15).

---

ಅಡಿಟಿಪ್ಪಣಿಗಳು

[1]Charles L. Feinbergನು ಹೇಳಿದ್ದೇನೆಂದರೆ ಬಾಬಿಲೋನಿನ ಭಾಷೆಯಲ್ಲಿ ಈ ಹೆಸರಿನ ಒಂದು ರೂಪವು *(al) ಲಾರ್ಸಾ* ("ಲಾರ್ಸಾ ಪಟ್ಟಣ") ಮತ್ತು ಅದು ಪ್ರಾಚೀನ ಸುಮೆರಿಯನ್ ಭಾಷೆಯ ಹೆಸರು "ಅರರ್ವಾ" ("ಬೆಳಕಿನ ನೆಲೆ") ಎಂದಾಗಿರುತ್ತದೆ. (Charles L. Feinberg, "Ellasar," in *The International Standard Bible Encyclopedia*, rev. ed., ed. Geoffrey W. Bromiley [Grand Rapids, Mich.: Wm. B. Eerdmans Publishing Co., 1982], 2:73–74.) ಕೆಲವರು "ಎಲ್ಲಾಸಾರ" ಎಂಬುದನ್ನು ದಕ್ಷಿಣ ಬಾಬಿಲೋನಿನಲ್ಲಿರುವ ಲಾರ್ಸಾ (ಸೂರ್ಯ ದೇವರ ನಗರ) ಎಂಬುದರೊಂದಿಗೆ ಗುರುತಿಸುತ್ತಾರಾದರೂ, ವಾಯುವ್ಯ ಮೆಸಪೋತಾಮ್ಯದಲ್ಲಿನ ಒಂದು ಸ್ಥಳವು "ಅರಿಯೋಕ" ದೊರೆಯ ಹೆಸರಿಗೆ ಉತ್ತಮವಾಗಿ ಸರಿಹೊಂದಬಹುದಾಗಿದೆ. [2]K. A. Kitchen, *On the Reliability of the Old Testament* (Grand Rapids, Mich.: Wm. B. Eerdmans Publishing Co., 2003), 320. [3]David M. Howard, Jr., "Siddim, Valley of," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1988), 4:499–500. [4]*Genesis Apocryphon* 21. [5]Michael C. Astour, "El-paran," in *The Anchor Bible Dictionary*, ed. David Noel Freedman (New York: Doubleday, 1992), 2:423. ಪಾರಾನಿನ ಮರುಭೂಮಿಯು ಪ್ರಾಚೀನ ಕಾನಾನಿನ ದಕ್ಷಿಣ ದಿಕ್ಕಿನಿಂದ ಎಲಾತಿನ ವರೆಗೂ ವಿಸ್ತರಿಸಿರುವ ಒಂದು

ಬೃಹತ್ ಮರುಭೂಮಿಯಾಗಿತ್ತು ಮತ್ತು ಸೀನಾಯಿ ಪರ್ಯಾಯದ್ವೀಪದ ಒಂದು ಭಾಗವನ್ನು ಒಳಗೊಂಡಿತ್ತು. [6]ಅಮೋರಿಯರ ಇತರ ಭದ್ರ ನೆಲೆಗಳು ಯೋರ್ದನ್ ನದಿಯ ಪೂರ್ವ ದಿಕ್ಕಿನಲ್ಲಿ (ಅರಣ್ಯಕಾಂಡ 21:13, 21-31) ಮತ್ತು ಪಶ್ಚಿಮಕ್ಕೆ (ಯೆಹೋಶುವ 7:7; 10:5-12) ಚದುರಿದ್ದವು. [7]Duane E. Smith, "Bitumen," in *The International Standard Bible Encyclopedia*, rev. ed., ed. Geoffrey W. Bromiley (Grand Rapids, Mich.: Wm. B. Eerdmans Publishing Co., 1979), 1:521. [8]Josephus *Antiquities* 1.9. [9]John T. Willis, *Genesis*, The Living Word Commentary (Austin, Tex.: Sweet Publishing Co., 1979), 227. [10]"ಎಷ್ಕೋಲ" ಎಂಬುದು ಹೆಬ್ರೋನಿನ ಸಮೀಪವಿರುವ ಒಂದು ಕಣಿವೆಯ ಹೆಸರು ಸಹ ಆಗಿತ್ತು (ಅರಣ್ಯಕಾಂಡ 13:23, 24). ಅದರ ಅರ್ಥವು "[ದ್ರಾಕ್ಷೆಯ] ಗೊಂಚಲುಗಳು" ಎಂದಾಗಿರುತ್ತದೆ.

[11]"ಇಬ್ರಿಯ" ಎಂಬುದು "ಏಬರ" ಎಂಬುದರಿಂದ ತೆಗೆದುಕೊಳ್ಳಲಾದ ಬಿರುದು ಎಂಉ ತೋರುತ್ತದೆ (10:21-25; 11:14-16) ಯಾಕೆಂದರೆ ಎರಡೂ ಪದಗಳು ಮೂರು ವ್ಯಂಜನಗಳನ್ನು ಒಳಗೊಂಡಿರುತ್ತವೆ: עבר (*ಬ್ರ*). ಇಬ್ರಿಯ ಭಾಷೆಗೆ ಕ್ರಿ.ಶ. 800 ತನಕವೂ ಯಾವದೇ ಲಿಖಿತ ಸ್ವರಾಕ್ಷರಗಳು ಇರಲಿಲ್ಲವಾದ್ದರಿಂದ, ಈ ಪದದ ವಿವಿಧ ಅಕ್ಷರಗಳು ಮತ್ತು ಉಚ್ಚಾರಣೆಗಳು ಅಭಿವೃದ್ಧಿಗೊಂಡವು ಎಂಬುದು ನಮಗೆ ನಿಖರವಾಗಿ ತಿಳಿದಿರುವದಿಲ್ಲ. [12]ಅಲ್ಲದೆ, ಪ್ರಾಚೀನ ಯೆಹೂದಿ ಭಾಷೆಗಳಲ್ಲಿನ ತಜ್ಞರು ವಾದಿಸುವದೇನೆಂದರೆ "ಆಪೀರ ಮತ್ತು ಇಬ್ರ ಇವುಗಳನ್ನು ಸಂಬಂಧಗೊಳಿಸಬೇಕಾದರೆ" ಪದಗಳಲ್ಲಿರುವ ವ್ಯಂಜನ ಹಾಗೂ ಸ್ವರಾಕ್ಷರಗಳೆರಡೂ "ಬಹಳ ಅಸಂಭವನೀಯವಾಗಿರುವ ರೂಪಾಂತರವನ್ನು ಅಗತ್ಯವಾಗಿಸುತ್ತದೆ" (Victor P. Hamilton, *The Book of Genesis: Chapters 1–17*, The New International Commentary on the Old Testament [Grand Rapids, Mich.: Wm. B. Eerdmans Publishing Co., 1990], 405). [13]ಈ ಅನುವಾದವು NASBಯ ಕೆಲವೊಂದು ಮುದ್ರಣಗಳಲ್ಲಿನ ಬದಿಟಿಪ್ಪಣಿಗಳಲ್ಲಿ ಕೊಡಲ್ಪಟ್ಟಿರುತ್ತದೆ. [14]Bruce K. Waltke, *Genesis: A Commentary* (Grand Rapids, Mich.: Zondervan Publishers, 2001), 232. [15]"ಬಂಧು" ಎಂಬುದು אָח *(ಆಕ್)* ಎಂಬ ಪದದ ಅನುವಾದವಾಗಿರುತ್ತದೆ, "ನಾವು ಸಹೋದರರಲ್ಲವೆ" ಎಂಬ ಮಾತಿನಲ್ಲಿ ಇದೇ ಪದವು ಕಂಡು ಬರುತ್ತದೆ (13:8). [16]Victor P. Hamilton, "חָנִיךְ," in *TWOT*, 1:301. [17]Michael C. Astour, "Shaveh, Valley of," in *The Anchor Bible Dictionary*, 5:1168. [18]Francis Brown, S. R. Driver, and Charles A. Briggs, *A Hebrew and English Lexicon of the Old Testament* (Oxford: Clarendon Press, 1962), 751. [19]Michael C. Astour, "Melchizedek," in *The Anchor Bible Dictionary*, 4:684. [20]George J. Brooke, "Melchizedek (11QMelch)," in *The Anchor Bible Dictionary*, 4:687–88.

[21]Brown, Driver, and Briggs, 888–89. [22]R. Laird Harris, "קָנָה," in *TWOT*, 2:803–4. [23]"ಒಪ್ಪಿಸಿದನು" ಎಂಬುದು מִגֵּן *(ಮಾಗಾನ್)* ಎಂಬ ಕ್ರಿಯಾಪದದ ಅನುವಾದವಾಗಿದೆ, ಇದು 15:1ರಲ್ಲಿನ "ಗುರಾಣಿ" (מָגֵן, *ಮಾಗೆನ್)* ಎಂಬ ಅದೇ ಮೂಲ ಪದದಿಂದ ಬಂದಿರುತ್ತದೆ. ಈ ಇಬ್ರಿಯ ಮೂಪ ಪದವು ಎರಡು ಕಥೆಗಳನ್ನು ಒಂದಕ್ಕೊಂದು ಉತ್ತಮವಾಗಿ ಸಂಬಂಧಗೊಳಿಸುತ್ತದೆ. [24]Gordon J. Wenham, *Genesis 1–15*, Word Biblical Commentary, vol. 1 (Waco, Tex.: Word Books, 1987), 317; John E. Hartley, "צַר," in *TWOT*, 2:779. [25]ಆ ವಿಧವಾಗಿ ದಶಮಾಂಶ ಕೊಡುವದರ ಉದಾಹರಣೆಗಳಿಗಾಗಿ, ನೋಡಿರಿ John H. Walton, "Genesis," in *Zondervan Illustrated Bible Backgrounds Commentary*, vol. 1, *Genesis, Exodus, Leviticus, Numbers, Deuteronomy*, ed. John H. Walton (Grand Rapids, Mich.: Zondervan, 2009), 83. [26]ಅಬ್ರಹಾಮನು ತನ್ನ ಕೈಯನ್ನು ಯೆಹೋವನ ಕಡೆಗೆ ಎತ್ತಿದನು ಎಂಬುದಾಗಿ ಇಬ್ರಿಯ ವಾಕ್ಯವು ಹೇಳುತ್ತದೆ, ಆತನು ಒಂದು ಪ್ರಮಾಣ ಮಾಡಿದ್ದನು ಎಂಬುದನ್ನು ಅದು ಸೂಚಿಸುತ್ತದೆ. ಪ್ರಾಚೀನ ಸಮಯಗಳಲ್ಲಿ, ಒಂದು ಪ್ರಮಾಣವನ್ನು ಮಾಡುವ ರೂಢಿಯಾಗಿ ಅನುಸರಿಸುತ್ತಿದ್ದ ಸಂಗತಿಯೆಂದರೆ ವಾಗ್ದಾನ ಮಾಡಿರುವ ಪ್ರಕಾರ ನಡೆಸುವೆನೆಂಬುದಕ್ಕೆ ಗುರುತಾಗಿ ಕೈಯನ್ನು ಮೇಲಕ್ಕೆ ಎತ್ತಲಾಗುತ್ತಿತ್ತು (ಧರ್ಮೋಪದೇಶಕಾಂಡ 32:40; ಯೆಶಾಯ 62:8; ದಾನಿಯೇಲ 12:7). [27]ಇಸ್ರಾಯೇಲ್ ಎಂಬುದು ಹಳೆಯ ಒಡಂಬಡಿಕೆಯಲ್ಲಿ ದೇವರ "ಜನ" (ಏಕವಚನ) ಆಗಿತ್ತು (ವಿಮೋಚನಕಾಂಡ 3:7, 10; 4:29-31; 5:1; 19:6-11), ಆದರೆ ಅನ್ಯಜನರು "ಜನಾಂಗಗಳು" ಆಗಿದ್ದರು (ಬಹುವಚನ; ವಿಮೋಚನಕಾಂಡ 19:5; ಕೀರ್ತನೆ 96:1-13; ಯೆಶಾಯ 56:6-8), ಇವರನ್ನು ದೇವರು ತನ್ನ ಜನರನು ನೀಡುವ ಸಾಕ್ಷಿಯ ಮೂಲಕವಾಗಿ ರಕ್ಷಿಸಬೇಕೆಂದು ಬಯಸಿದನು.